# HAVYAKA SANDESHA
# ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

Vol. XIX, No. 11 | February 2012 | Pages 12 | **Rs. 2/-**

## ಎಲೆಗಳು ಉದುರಿ ಮರಗಳು ಬರಿದು, ಮಂಜಿನ ಹನಿಗಳು ಮುತ್ತಾಗಿ ಸುರಿದು.



## "ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ" ಪ್ರಶಸ್ತಿ ಪ್ರದಾನ ಸಮಾರಂಭ-2012

## "Karki Venkataraman Shastri Suri" Award Presentation Ceremony - 2012

***Date :*** **4-3-2012 Time : 2.30 p.m. onwards**

***Venue :*** **Vishweshwarayya Hall, Karnataka Sangha,**

**Matunga (W), Mumbai - 400 016.**

*PAGE DONATED BY : **M/S. METALLURGICAL SERVICES,** COURTESY : **SHRI RAMESH G. HEGDE,** MADAPPAN, KARKI, DADAR T. T. (DEC.-2012)*

**"Havyaka Sandesha"** is a monthly publication by **HAVYAKA WELFARE TRUST, Mumbai** B-207, Valmiki Apartment, Sundar Nagar, Kalina, Vidyanagari P. O. Mumbai - 400 098 ✆2665 2591

*Hon. Editor* : Smt. Amita S. Bhagwat

*Hon.Joint Editor* : G. V. Bhagwat

*Editorial Committee* :
R. P. Hegde
R. M. Shastri
Smt. Shashikala Hegde
Smt. Tanuja Hegde

*Publisher* : Narayan Akadas R.
**Hon. Gen. Secretary**

*Printed at* : M/s. Navin Printers
**Mumbai - 400 016.**
**✆ 2430 8316**

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :** Patron (PT) Rs. 5010/-, benefactor (BN) Rs.3010/-, Sustaining Life Member (SL) Rs. 2010/-, Life Member (LM) 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2011-2012**

*President* : N. R. Hegde, Dombivli
*Vice - President* : Shivkumar P. Bhagwat
*Hon. Gen. Secretary* : Narayan Akadas
*Hon. Jt. Secretary* : R. M. Shastri, Dombivli
*Hon. Treasurer* : A. G. Bhat

*Elected Members :*

Smt. Tanuja Hegde — R. P. Hegde
Smt. Shashikala Hegde — R. N.Kameshwar
A. K. Bhat — Smt. Uma Swamy
M. G. Ramakrishna — Sanjay Bhat
Ramesh Vaidya

*Co-opted Members :*

G. V. Bhagwat — Ganesh Shanbhag

***<u>ಸಂಪಾದಕೀಯ</u>***

# ಮಧುರ ಬಾಂಧವ್ಯ ಬೆಳೆಯಲಿ

ಗೋಡೆಯ ಮೇಲಣ ಹಳೆ ಕ್ಯಾಲೆಂಡರನ್ನು ಕಳಚಿ ಹೊಸ ಕ್ಯಾಲೆಂಡರ್ ತೂಗಿ ಹಾಕಿ, ಹೊಸ ವರ್ಷವನ್ನು ಸ್ವಾಗತಿಸಿ ಮತ್ತೆ ದಿನಗಳು ವೇಗವಾಗಿ ಸರಿದು ಹೋಗುತ್ತಿವೆ. ಆದರೂ ಕಳೆದ ವರ್ಷಗಳ ಸಿಹಿ ಕಹಿ ನೆನಪುಗಳು ಮನದಲ್ಲಿ. ಭ್ರಷ್ಟಾಚಾರದ ಆರೋಪಗಳಿಗೆ ತುತ್ತಾಗಿ ಕಂಬಿಗಳನ್ನು ಎಣಿಸುವವರನ್ನು ನೋಡಿದಾಗ ಯಾರೂ ಕೂಡಾ ಕಾನೂನಿನ ಕೈಯಿಂದ ತಪ್ಪಿಸಿಕೊಳ್ಳುವಂತಿಲ್ಲ ಎನ್ನುವ ಸಮಾಧಾನ ಒಂದೆಡೆಯಾದರೆ, ಭ್ರಷ್ಟಾಚಾರವು ಈ ಮಟ್ಟಕ್ಕೆ ತಲುಪಿದರ ಬಗ್ಗೆ ಖೇದ. ಅಣ್ಣಾ ಹಜಾರೆಯವರಿಗೆ ಜನರು ನೀಡಿದ ಬೆಂಬಲವು ನಮ್ಮಲ್ಲಿ ಮೌಲ್ಯಗಳು ಜೀವಂತವಾಗಿವೆ. ಎಂದು ಸಮಾಧಾನ ಹುಟ್ಟಿಸಿದರೂ, ಲೋಕಪಾಲ ಬಿಲ್ ಮಂಜೂರಾಗಿಲ್ಲ ಎನ್ನುವ ವ್ಯಥೆ. ಮಕರ ಸಂಕ್ರಾಂತಿಯ ಸಂದರ್ಭದಲ್ಲಿ ಸೂರ್ಯ ಹೆಚ್ಚು ಹೆಚ್ಚು ಬೆಳಕನ್ನು ಕೊಡುತ್ತಾ ಮುನ್ನಡೆಯುವಂತೆ ನಾವು ಕೂಡಾ ಆಶಾವಾದದೊಂದಿಗೇ ಸಾಗಬೇಕು.

ತ್ಯಾಜ್ಯ ವಸ್ತುಗಳನ್ನು ಮನೆಯಿಂದ ಹೊರಹಾಕಿ ಮನೆಯನ್ನು ಸ್ವಚ್ಛಗೊಳಿಸಿದ ಹಾಗೇ ಮನಸ್ಸಿನಿಂದಲೂ ಕೂಡ ಅಪ್ರಿಯವಾದ ಘಟನೆಗಳನ್ನು, ಕಹಿ ನೆನಪುಗಳನ್ನು ಗುಡಿಸಿಬಿಡಬೇಕು. ಅಪ್ರಿಯವಾದ ನೆನಪುಗಳು ಗಟ್ಟಿಯಾಗಿ ಬೇರೂರಬಾರದು. ಅವು ಶಿಥಿಲವಾಗಬೇಕು, ಅಂದರಷ್ಟೇ ಸಂಬಂಧಗಳು ಶಿಥಿಲವಾಗದೇ ಗಟ್ಟಿಯಾಗುತ್ತವೆ. ಮಕರ ಸಂಕ್ರಮಣದಲ್ಲಿ ಎಳ್ಳು ಬೆಲ್ಲವನ್ನು ಪರಸ್ಪರ ಹಂಚಿಕೊಳ್ಳುವ ಸಂಭ್ರಮದಲ್ಲಿ ಸ್ನೇಹ, ವಿಶ್ವಾಸಗಳೊಂದಿಗೆ ಒಬ್ಬರೊಬ್ಬರಲ್ಲಿ ಬೆಸೆದುಕೊಳ್ಳುವ ಸಂಕೇತವಿದೆ.

'ಒಬ್ಬನುಣಿವೂಟದಲ್ಲಿ ಸವಿಯಲ್ಲಿ ಸೊಗಸಿಲ್ಲ' ಎಂದು ನುಡಿದಿದ್ದರು ಡಿ. ವಿ. ಜಿಯವರು. ಬಹಳಷ್ಟು ಕೀಟಗಳಲ್ಲಿ, ಪಶುಪಕ್ಷಿಗಳಲ್ಲೂ ಗುಂಪಿನಲ್ಲಿ ಹಂಚಿಕೊಂಡು ತಿನ್ನುವ ಗುಣವನ್ನು ನಾವು ಕಾಣಬಹುದು. ಒಂದಾಗಿ ಕೆಲಸ ಮಾಡುವ, ಕೂಡಿ ಉಣ್ಣುವ, ಬಾಳುವ ಪ್ರಕ್ರಿಯೆಗಳಿಂದಲೇ ಜೀವನದಲ್ಲಿ ಪ್ರೀತಿ ವಿಶ್ವಾಸಗಳು ನೆಲೆಗಟ್ಟಾಗುತ್ತವೆ. ನೇಹ ಸ್ನೇಹಗಳಲ್ಲಿ ಜೀವ ಬೆರೆತಾಗ ಜೀವನ ಮಧುರವಾಗುತ್ತದೆ. ಆದರೆ ಇತ್ತೀಚೆಗೆ ಉದ್ಯೋಗ ಜಗತ್ತಿನಲ್ಲಾದ ಕ್ರಾಂತಿಯಿಂದಾಗಿ, ನೌಕರಿಯನ್ನರಿಸಿ ಬೇರೆ ಬೇರೆ ಊರಿಗೆ ಹೋಗುವ ಪ್ರಸಂಗಗಳಲ್ಲಿ ಒಟ್ಟು ಕುಟುಂಬಗಳು ವಿಘಟಿತವಾಗುತ್ತಿವೆ. ವ್ಯಕ್ತಿಸ್ವಾತಂತ್ರ್ಯದ ಪರಿಕಲ್ಪನೆ ಬೆಳೆಯುತ್ತ ಹೋದಂತೆ 'ಒಗ್ಗಟ್ಟಿನಲ್ಲಿ ಬಲ' ಎನ್ನುವ ನಾಣ್ಣುಡಿ ಹುಸಿಯೆನ್ನಿಸುತ್ತಿದೆ. ಒಂದೇ ಊರಿನಲ್ಲಿದ್ದರೂ ಅಣ್ಣ ತಮ್ಮಂದಿರೆಲ್ಲ ಒಂದಾಗಿ ಕೂಡಿ ಬಾಳುವ ಕಲ್ಪನೆಯೇ ಇಂದು ಅಪ್ರಸ್ತುತವೆನಿಸುತ್ತಿದೆ. ಆರ್ಥಿಕ ಪ್ರಗತಿಯೇ ಜೀವನವನ್ನು ಅಳೆಯುವ ಮಾನದಂಡವಾದಾಗ ಮನುಷ್ಯ ಸಂಬಂಧಗಳೂ ವ್ಯವಹಾರಿಕ ಮಟ್ಟದಲ್ಲಿಯೇ ನಿಂತುಬಿಡುತ್ತವೆ. 'ಸಂಬಂಧ' ಶಬ್ದದಲ್ಲಡಗಿರುವ 'ಬಂಧ' ಎಂದರೆ ಬಿಗಿಯಾಗಿ ಕೂಡಿಕೊಂಡಿರುವುದು. ಆದರೆ ನಮ್ಮನ್ನು ಕೂಡಿಸುವ ಭಾವಗಳ ಅಂಟು ತನ್ನ ಸತ್ವವನ್ನು ಕಳೆದುಕೊಂಡರೆ, ಬಂಧವೂ ಸಡಿಲಿಗೊಳ್ಳುತ್ತದೆ. ಕೇವಲ ಆರ್ಥಿಕವಾಗಿ ಬೆಳೆಯುತ್ತಾ, 'ಯಾರು ಹೆಚ್ಚು' ಎನ್ನುವ ಪೈಪೋಟಿಯಲ್ಲಿತೊಡಗಿಸಿಕೊಂಡಂತೆ ಸ್ನೇಹ, ಪ್ರೀತಿ, ವಿಶ್ವಾಸ ಮುಂತಾದ ಸ್ನಿಗ್ಧ ಭಾವಗಳಿಂದ ನಾವು ದೂರವಾಗುತ್ತೇವೆ. ನಾವೇ ಸೃಷ್ಟಿಸಿಕೊಂಡ ಕೃತಕ ವಾತಾವರಣದಲ್ಲಿ ಉಸಿರಾಡಿಸುತ್ತ, ಅದರಲ್ಲಿಯೇ ದಿನ ಕಳೆಯುವ ನಾವು ಎಳ್ಳು ಬೆಲ್ಲವನ್ನು ಪರಸ್ಪರ ಹಂಚಿಕೊಂಡು ಬಾಂಧವ್ಯದ ಮಾಧುರ್ಯವನ್ನು ಹೆಚ್ಚಿಸಿಕೊಳ್ಳೋಣ. ತಮಗೆಲ್ಲರಿಗೂ ಮಕರ ಸಂಕ್ರಮಣದ ಶುಭಾಶಯಗಳು.

Amita S Bhagwat

e-mail : amitabhagwat@gmail.com

*PAGE DONATED BY :* ***ADVOCATE M.S. PANDIT, PUNE***

# PRESIDENT'S MESSAGE

Dear Friends,

The picnic as planned on 26th January makes a good beginning as for as the activities of the Trust. We know that by the time Sandesha, our mouth piece reaches you, picnic will be already over. However, as on today we are happy with the enthusiasm shown and interest taken by our youngsters, which brings hope that the picnic will be a memorable one. It is one event which helps the people to mingle with each other without any age bar. We hope that the response for the picnic will be excellent.

On March 4 we have organized the KAARKI VENKTRAMAN SHASTRI SURI award function. We are pleased to inform you all that Mr. Ishvar Diatota (Bangaluru)has agreed to be present on that day to accept the award. Friends, we are fortunate have a person of his eminence as recipient of this prestigious award. He is a journalist of substance who works at grass route level and also a social worker. Please make yourself free on that day as to not miss the opportunity to hear MR. ISHVAR DIATOTA. It is worth noting that the award ceremony will be followed by intresting cultural program. Details of the program are featured in this issue of Havyaka Sandesha.

We regret to inform you that as per the latest information, the land in Dombivli (which is indentified for the old age home & community hall)is put under reservation by MMRDA in their new Development Plan published in December 2011. We understand that M/S Lodha has already approached MMRDA with an objection. Friends we have to wait and watch. We are also working out some alternate with M/S Lodha. Let us be optimistic and hope for the best.

Our auditors are completing the accounts of relating to Panvel land and the work is at the final stage. We will inform you as soon as it is complete.

We are saddened by the demise of our ex vice president Mr. GOPAL KURSE on 5th January 2012. It is not only great loss to his family but great loss to entire Havyaka family. As a guide, friend and philosopher he always stood by us even during difficult situation. He always had a positive approach as vice president of Havyaka Welfare Trust and stood like pillar of strength. We pray almighty to for the eternal peace of the departed soul and to give courage to bereaved family to bear the loss.

With warm regards

**N. R. HEGDE**

*President*

## DONATION FOR WOMEN WELFARE CELL

| | |
|---|---|
| **Smt. Sujata & Shri Devesh Kanjarpane** | **$ 600** |
| **Smt. Asha Nayak** | **Rs. 3000/-** |
| **Dr. (Smt.) Sadhana Hegde** | **Rs. 500/-** |

*PAGE DONATED BY : **SMT. SHANTA V. HEGDE,** CARMICHAEL ROAD (DEC.-2012)*

# ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬೈ

# HAVYAKA WELFARE TRUST, MUMBAI

## "ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ" ಪ್ರಶಸ್ತಿ ಪ್ರದಾನ ಸಮಾರಂಭ-2012

## "Karki Venkataraman Shastri Suri" Award Presentation Ceremony - 2012

**DATE : 4-3-2012 TIME : 2.30 P.M. ONWARDS**

**Venue : Vishweshwarayya Hall, Karnataka Sangha, Matunga (W), Mumbai-400 016.**

ಸಹಕಾರ / Co-operation — ಕರ್ನಾಟಕ ಮಲ್ಲ, ಕನ್ನಡ ದೈನಿಕ ಮುಂಬೈ
Karnataka Malla, Kannada Daily Paper, Mumbai
ಕರ್ನಾಟಕ ಸಂಘ. ಮಾಟುಂಗಾ (ಪ)
Karnataka Sangha, Matunga (W)

ಪ್ರಶಸ್ತಿ ಪಾತ್ರರು / Awardee — ಶ್ರೀ ಈಶ್ವರ ದೈತೋಟ (ಖ್ಯಾತ ಪತ್ರಿಕೋದ್ಯಮಿ, ಸಮಾಜ ಸೇವಕ)
Shri ISHWAR DAITOTA (Eminent Journalist, Social Worker)

ಮುಖ್ಯ ಅತಿಥಿಗಳು / Chief Guest — ವಿದ್ವಾನ್ ಕೈರಬೆಟ್ಟು ವಿಶ್ವನಾಥ ಭಟ್
Vidwan Kairabettu Vishwanath Bhat

ಗೌರವ ಅತಿಥಿಗಳು / Guest of Honour — ಶ್ರೀ ಚಂದ್ರಶೇಖರ ಪಾಲೆತ್ತಾಡಿ (ಸಂಪಾದಕರು, ಕರ್ನಾಟಕ ಮಲ್ಲ)
Shri CHANDRASHEKHAR PALETTADI (Editor, Karnataka Malla)
ಡಾ.ಜಿ. ಡಿ. ಜೋಶಿ (ಅಧ್ಯಕ್ಷರು, ಕರ್ನಾಟಕ ಸಂಘ, ಮಾಟುಂಗಾ ಪಶ್ಚಿಮ)
Dr. G. D. JOSHI (President, Karnataka Sangha, Matunga West)

ಅಧ್ಯಕ್ಷತೆ / Chairperson — ಶ್ರೀ ಎನ್. ಆರ್. ಹೆಗಡೆ (ಅಧ್ಯಕ್ಷರು, ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬೈ)
Shri N. R. HEGDE (President, HWT, Mumbai)

### ಮನೋರಂಜನಾ ಕಾರ್ಯಕ್ರಮಗಳು / Entertainment Programmes

ಶಾಸ್ತ್ರೀಯ ನೃತ್ಯ / Classical Dance — ಕು। ವೈಷ್ಣವಿ ಶೆಟ್ಟಿ (Kum. Vaishnavi Shetty)
ಕು। ಮೇಘಮಾಲಾ ಪೂಜಾರಿ (Kum. Meghamala Poojari)
ಕು। ಧೃುತಿ ಶೆಟ್ಟಿ (Dhruti Shetty)

ನಾಟಕ / Drama — ಗುಮ್ಮನೆಲ್ಲಿಹ ತೋರಮ್ಮ
Gummanelliha Toramma
Karnataka Sangha, Kalabharathi
Directed by : Dr. Bharatkumar Polipu
Written by : Shriranga

ಸರ್ವರೂ ಬಂದು-ಮಿತ್ರರೊಡಗೂಡಿ ಆಗಮಿಸಿ
ಕಾರ್ಯಕ್ರಮವನ್ನು ಚೆಂದಗಾಣಿಸಿಕೊಡಬೇಕಾಗಿ ವಿನಂತಿ

ಶ್ರೀ ಎನ್. ಆರ್. ಹೆಗಡೆ (ಅಧ್ಯಕ್ಷರು)
ಶ್ರೀ ನಾರಾಯಣ ಅಕದಾಸ (ಗೌ. ಕಾರ್ಯದರ್ಶಿಗಳು)
ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬಯಿ

ಶ್ರೀಮತಿ ತನುಜಾ ಹೆಗಡೆ
(ಸಂಚಾಲಕರು, ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ದತ್ತಿ ಕಾರ್ಯಕ್ರಮ)

*PAGE DONATED BY : **SHRI BALCHANDRA MARKANDE, DOMBIVLI***

# JUSTICE VISHNU GAJANANA SABHAHIT

**By : Mr. M.S. Pandit, & Mrs. Shobha Pandit**



We have attempted to write a few lines on the multifaceted and magnificent personality that was Justice Vishnu Sabhahit who passed away while on duty on 12th December, 2011. We were all numbed by this shocking event at the prime of his career. The only way it could be explained was that as it has happened with many greats in history, 'those who are loved here are also loved there'.

Born in a well known Sabhahit family residing at Agrahara of Havyaka Community at Haldipur (Honnavar Taluka in Karnataka), he was religious and God fearing from his early childhood. He truly believed 'work is worship' and never thought about the financial rewards of the job. While he was extremely hardworking he was also a complete family man. He never excused himself from any social and family commitments even when he was not too well. He was well known for impeccable integrity, clarity of thought and sound judgments which stood the test of time. He was hardworking and completely devoted to work. He personally looked into our needs and comfort whenever we visited his house in Bengaluru. Every one we came across had similar sentiments. After taking care of the guests and visitors, we could see him sitting in his home office working late up to 1 a.m in the night. Such was his reputation of straight forwardness and judicial acumen that when the Lordships of the High Court had difference in their perception, the matter was referred to him as the final arbiter of justice. He actually wrote the Judgments even when he shared the Bench with Chief Justices. Unfortunately, death snatched away this gentle erudite Judge when he was just fifty six.

When I got married to Shobha, daughter of late Justice Gajanana Sabhahit, Vishnu was a practicing advocate in his twenties. She has three younger brothers, Narayan, Ganesh and Ravi who were still studying. They have also excelled in their chosen sphere of activity. I was working in Bombay at that time and as most mumbaikar's do, I was used to travelling by trains. He taught me scooter riding which became useful when I shifted to Pune.

Late Justice Gajanan Sabhahit was also well known both for his legal acumen and scholarship. He authored several books and well known even in Maharashtra. Actually, when I shared the news of my engagement to Shobha with my Professors, Prof. Ranganath Rao, Vice Principal of Government Law College and Senior Advocate and faculty Shri Shankar Narayan, they commended saying his book on Motor Vehicles Act and Compensation is a bible for all law practitioners in this field. He is also remembered by many as an outstanding personality of Uttara Kannada District and as a leading lawyer of Karwar Bar and later as a Judge of District Court and High Court. I have heard words of appreciation from senior lawyers and even his colleague judges. Unfortunately, he passed away when he was just sixty. It is to the credit of my mother-in-law late Mrs. Janaki Sabhahit who took care of the family during the difficult times. As the eldest son Vishnu had to shoulder a great deal of responsibility. Thus, the young advocate Vishnu passed through turbulent times at an early stage in his career. He became a District Judge at a young age and later as Registrar of Karnataka High Court before his elevation as a Judge of the High Court about ten years ago.

While there were health concerns, no one thought he will depart so soon. His personality and attitude towards life can only be understood by understanding his way of life. He did not even pray God for anything more than what he deserved. For instance his everyday prayer before Lord Ganesha: "Anayasena Maranam Vina Dynena Jeevanam, Yatha yogyam thatha Kuru". His wife Shreelaxmi explains that when the salary of the judges was revised he was thinking of the ways of discharging additional responsibility rather than of collecting the arrears. He is survived by wife Mrs. Shreelaxmi, daughter Dr. Harshita who is currently pursuing her post graduation in medicine and son Gajanan who has just completed his degree in Engineering.

He was a Senior Judge, no. 2 in the hierarchy, of Karnataka High Court and was expected to be elevated as Chief Justice of one of the High Courts at a not too distant future. As we understand, he had very bright prospects of getting elevated to the Supreme Court at a future date. It is unfortunate that a bright star among us has suddenly disappeared which is a great loss to the community and to the nation as well. But he will surely remain in our hearts and minds as a kind hearted guiding spirit for all time to come ●

UIL

UGRU INDUSTRIES

*With Best Compliments from*

UGRU INDUSTRIES

**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

*ADVT.*

# ಮೋಹನದಾಸ ಕರಮಚಂದ ಗಾಂಧೀಜಿಯವರ ಸಂಕ್ಷಿಪ್ತ ಆತ್ಮಕಥನ

*( ಹಿಂದಿನ ಸಂಚಿಕೆಯಿಂದ )*

✍ ಶ್ರೀಮತಿ ಎಚ್.ಎಲ್. ಸೀತಾದೇವಿ, ಮೈಸೂರು

## ಸರ್ವರಕ್ಷಕ ದೇವರು

ನಾನು ಹಿಂದೂ ಧರ್ಮ ಹಾಗೂ ಜಗತ್ತಿನ ಇತರ ಧರ್ಮಗಳ ಸ್ಥೂಲ ಪರಿಚಯ ಮಾಡಿಕೊಂಡಿದ್ದೆ. ಆದರೆ ಧರ್ಮಗಳ ಬಗೆಗಿನ ತಿಳಿವಳಿಕೆ ನಿರುಪಯುಕ್ತ ಎಂಬುದು ಇಂಗ್ಲೆಂಡ್‌ನಲ್ಲಿರುವಾಗ ನನ್ನ ಅನುಭವಕ್ಕೆ ಬಂತು. ನಾನು ಇಂಗ್ಲೆಂಡ್‌ನಲ್ಲಿದ್ದ ಕೊನೆಯ ವರ್ಷದಲ್ಲಿ (೧೮೯೦) ಪೋರ್ಟ್ಸ್‌ಮತ್‌ನಲ್ಲಿ ಒಂದು ಶಾಖಾಹಾರಿ ಸಮ್ಮೇಳನ ನಡೆಯಿತು. ನಾನು ಭಾರತದ ಮತ್ತೊಬ್ಬ ಮಿತ್ರನೊಂದಿಗೆ ಅದರಲ್ಲಿ ಭಾಗವಹಿಸಿದ್ದೆ. ನಾನು ಅಲ್ಲಿ ಒಂದೆರಡು ದಿನಗಳ ಮಟ್ಟಿಗೆ ತಂಗಬೇಕಾಗಿತ್ತು. ಅದೊಂದು ದೊಡ್ಡ ರೇವು ಪಟ್ಟಣ. ಅಲ್ಲಿ ನಮ್ಮಂತಹರಿಗೆ ಯೋಗ್ಯವಾದ ವಸತಿ ಗೃಹ ಯಾವುದು ಎಂಬುದನ್ನು ನಿರ್ಧರಿಸುವುದೇ ಕಷ್ಟವಾಗಿತ್ತು. ನಾವೊಂದು ಮನೆಯಲ್ಲಿ ಬಿಡಾರ ಹೂಡಿದ್ದೆವು. ಸಂಜೆ ಸಮ್ಮೇಳನ ಮುಗಿದ ನಂತರ ನಾವು ಇಸ್ಪೀಟ್ ಆಡಲು ಕುಳಿತೆವು. ಮನೆಯೊಡತಿ ಸಹ ಸೇರಿದಳು. ಆಡುತ್ತಾ ಆಡುತ್ತಾ ನನ್ನ ಮನಸ್ಸು ಚಂಚಲವಾಗಿ, ಇನ್ನೇನು ಹಳಿ ತಪ್ಪಬೇಕು ಎನ್ನುವಷ್ಟರಲ್ಲಿ ನನ್ನ ಮಿತ್ರ ಎಚ್ಚರಿಸಿದ. ನನಗೆ ತುಂಬಾ ನಾಚಿಕೆಯಾಯಿತು. ಆತನಿಗೆ ತುಂಬು ಕೃತಜ್ಞತೆ ಅರ್ಪಿಸಿದೆ. ತಾಯಿಗೆ ಕೊಟ್ಟಿದ್ದ ಮಾತು ನೆನಪಿಗೆ ಬಂದು ಎದೆ ಹೊಡೆದುಕೊಳ್ಳಲಾರಂಭಿಸಿತು. ಹೆದರಿಕೆಯಿಂದ ನಡುಗಲಾರಂಭಿಸಿದೆ. ಅಕ್ಷರಶಃ ಆ ಜಾಗದಿಂದ ಓಡಿದೆ. ನಾನು ಅನ್ಯ ಸ್ತ್ರೀ ಸಂಗದಲ್ಲಿ ವಿಕಾರಕ್ಕೆ ವಶನಾದುದು ಇದೇ ಮೊದಲು. ಆ ರಾತ್ರಿ ಇಡೀ ನನಗೆ ನಿದ್ದೆ ಬರಲೇ ಇಲ್ಲ. ನಾನು ಊರು ಬಿಟ್ಟು ಹೋಗಲು ನಿರ್ಧರಿಸಿದೆ. ನನ್ನ ಬುದ್ಧಿ ಸ್ವಾಧೀನದಲ್ಲಿ ಇಲ್ಲದೆ ಒಂದು ಕ್ಷಣದಲ್ಲಿ ಎಂಥ ಅನಾಹುತ ನಡೆದು ಹೋಗುತ್ತಿತ್ತು ಎಂಬುದನ್ನು ನೆನೆಸಿಕೊಂಡು ವ್ಯಾಕುಲನಾದೆ. ಇನ್ನು ಮುಂದೆ ತುಂಬಾ ಜಾಗರೂಕನಾಗಿರಲು ನಿರ್ಧರಿಸಿದೆ.

ಆಗ ನನಗೆ ಧರ್ಮ ಎಂದರೇನು? ದೇವರು ಎಂದರೇನು? ಅದು ಹೇಗೆ ನಮ್ಮ ಮೇಲೆ ಪ್ರಭಾವ ಬೀರುತ್ತದೆ ಎಂಬುದು ಗೊತ್ತಿರಲಿಲ್ಲ. ಆದರೆ ಈಗ ಮಾತ್ರ ದೇವರೇ ನನ್ನನ್ನು ಪಾರು ಮಾಡಿದ್ದಾನೆ. ಇನ್ನು ಗತ್ಯಂತರವಿಲ್ಲ, ಸುಖವಿಲ್ಲ ಎಂದು ನಾನು ಕೈಕಟ್ಟಿ ಕುಳಿತಾಗಲೆಲ್ಲಾ ಎಲ್ಲಿಂದಲೋ ಸಹಾಯ ಒದಗಿ ಬಂದಿದೆ. ದೇವರ ಸ್ತುತಿ, ಪ್ರಾರ್ಥನೆ, ಉಪಾಸನೆ ಕೇವಲ ಅಂಧ ವಿಶ್ವಾಸವಲ್ಲ. ಅದು ನಮ್ಮ ಆಹಾರ, ಪಾನೀಯ, ನಮ್ಮ ಇನ್ನಿತರ ಚಟುವಟಿಕೆಗಳಿಗಿಂತ ಹೆಚ್ಚು ವಾಸ್ತವ. ಅದೇ ಸತ್ಯ, ಉಳಿದದ್ದೆಲ್ಲವೂ ಅಸತ್ಯ. ಇಂತಹ ಉಪಾಸನೆ, ಪ್ರಾರ್ಥನೆ, ಕೇವಲ ವಾಗಾಡಂಬರವಲ್ಲ. ಅದರ ಮೂಲ ಹೃದಯವೇ ಹೊರತು ಕಂಠವಲ್ಲ. ಪ್ರಾರ್ಥನೆಗೆ ನಾಲಿಗೆಯ ಆವಶ್ಯಕತೆ ಇಲ್ಲ. ಅದು ಹೃದಯದಿಂದ ಬರುವಂಥದ್ದು. ಹೃದಯ ಪರಿಶುದ್ಧತೆಯನ್ನು ಸಾಧಿಸಿದರೆ ಪ್ರಾರ್ಥನೆ ಖಂಡಿತಾ ಭಗವಂತನನ್ನು ತಲುಪುತ್ತದೆ. ಎಲ್ಲ ಕಲ್ಮಶಗಳಿಂದ ಹೃದಯವನ್ನು ಪರಿಶುದ್ಧಗೊಳಿಸುವ ಜೀವ ಝರಿ ಉಪಾಸನೆ ಎಂಬುದು ನನಗೆ ಮನದಟ್ಟಾಯಿತು.

## ಬ್ಯಾರಿಸ್ಟರ್ ಆದೆ

ನಾನು ಇಂಗ್ಲೆಂಡಿಗೆ ಹೋದ ಉದ್ದೇಶ ಹಾಗೂ ಬ್ಯಾರಿಸ್ಟರ್ ಆದ ವಿಷಯವನ್ನು ಇಲ್ಲಿ ಸಂಕ್ಷಿಪ್ತವಾಗಿ ಹೇಳಿ ಬಿಡುತ್ತೇನೆ.

ಬ್ಯಾರಿಸ್ಟರ್ ಪರೀಕ್ಷೆಯ ಪಠ್ಯಕ್ರಮ ಸುಲಭವಾಗಿತ್ತು. ಆ ಪರೀಕ್ಷೆಗಳಿಗೆ ಹೆಚ್ಚಿನ ಬೆಲೆ ಏನೂ ಇಲ್ಲ ಎಂಬು ಎಲ್ಲರಿಗೂ ಗೊತ್ತಿತ್ತು. ಆಗ ಇದ್ದುದು ಎರಡೇ ಪರೀಕ್ಷೆ, ಒಂದು ರೋಮನ್ ಕಾನೂನಿನಲ್ಲಿ, ಮತ್ತೊಂದು ಸಾಮಾನ್ಯ ಕಾನೂನಿನಲ್ಲಿ. ಅದಕ್ಕೆ ನಿಗದಿಯಾದ ಪಠ್ಯ ಪುಸ್ತಕಗಳೂ ಇದ್ದವು. ಪರೀಕ್ಷೆಗಳನ್ನು ಹಂತ ಹಂತವಾಗಿ ತೆಗೆದುಕೊಳ್ಳಲು ಅವಕಾಶವಿತ್ತು. ಸಾಮಾನ್ಯವಾಗಿ ಯಾರೂ ಪಠ್ಯ ಪುಸ್ತಕಗಳನ್ನು ಓದುತ್ತಿರಲಿಲ್ಲ. ಕೊನೆಯ ಎರಡು ಮೂರು ವಾರ ನೋಟ್ಸ್‌ಗಳನ್ನಷ್ಟೇ ಓದಿ ತೇರ್ಗಡೆಯಾಗಿ ಬಿಡುತ್ತಿದ್ದರು. ಪ್ರಶ್ನೆ ಪತ್ರಿಕೆಗಳು ಸುಲಭವಾಗಿಯೇ ಇರುತ್ತಿದ್ದವು. ಮೌಲ್ಯ ಮಾಪಕರು ಉದಾರಿಗಳಾಗಿರುತ್ತಿದ್ದರು. ಯಾರೂ ಫೇಲಾಗುವ ಸಂಭವವೇ ಇರುತ್ತಿರಲಿಲ್ಲ. ರೋಮನ್ ಲಾ ನಲ್ಲಿ ಶೇ. ೯೫ರಿಂದ ೯೯ ಫಲಿತಾಂಶ ಬಂದರೆ, ಕಾಮನ್ ಲಾನಲ್ಲಿ ಶೇ. ೭೫ಕ್ಕಿಂತ ಹೆಚ್ಚು ಮಂದಿ ಉತ್ತೀರ್ಣರಾಗುತ್ತಿದ್ದರು. ವರ್ಷಕ್ಕೆ ನಾಲ್ಕು ಪರೀಕ್ಷೆಗಳಿದ್ದರೂ, ಯಾರಿಗೂ ಅದು ಕಷ್ಟವಾಗುತ್ತಲೇ ಇರಲಿಲ್ಲ. ಆದರೆ ನಾನು ಅದನ್ನು ಕಷ್ಟವಾಗಿ ಮಾಡಿಕೊಂಡೆ. ಯಾರೂ ಓದದಿದ್ದ ಪಠ್ಯ ಪುಸ್ತಕಗಳನ್ನು ಓದಲೇಬೇಕೆಂದು ನಿರ್ಧರಿಸಿದೆ. ಪಠ್ಯವನ್ನೇ ಓದದಿರುವುದು ಒಂದು ಮೋಸ ಎಂದು ಭಾವಿಸಿ, ಅದನ್ನು ಕೊಳ್ಳಲು ಸಾಕಷ್ಟು ಹಣ ಖರ್ಚು ಮಾಡಿದೆ. ರೋಮನ್ ಕಾನೂನನ್ನು ಲ್ಯಾಟಿನ್ ಭಾಷೆಯಲ್ಲಿ ಓದಲು ನಿರ್ಧರಿಸಿದೆ. ಮೆಟ್ರಿಕ್ಯುಲೇಷನ್ ಸಂದರ್ಭದಲ್ಲಿ ಕಲಿತಿದ್ದ ಲ್ಯಾಟಿನ್ ಭಾಷೆ ಈಗ ನೆರವಿಗೆ ಬಂತು. ನಾನು ಹೀಗೆ ಕಷ್ಟಪಟ್ಟು ವ್ಯಾಸಂಗ ಮಾಡಿದ್ದು, ಮುಂದೆ ನನ್ನ ಸಮಯಕ್ಕೆ ಒದಗಿ ಬಂತು.

ಈ ರೀತಿಯಾಗಿ ೧೮೯೧ನೇ ಇಸವಿ ಜೂನ್ ೧೦ನೇ ತಾರೀಖು ನಾನು ಪರೀಕ್ಷೆಗಳಲ್ಲಿ ಉತ್ತೀರ್ಣನಾಗಿ ಬ್ಯಾರಿಸ್ಟರ್ ಆದೆ. ೧೧ನೇ ತಾರೀಖು ಇಂಗ್ಲೆಂಡಿನ ಹೈಕೋರ್ಟಿನಲ್ಲಿ ವಕೀಲನಾಗಿ ಹೆಸರು ನೋಂದಾಯಿಸಿ, ೧೨ನೇ ತಾರೀಖು ಭಾರತಕ್ಕೆ ಮರಳಿ ಬಂದೆ.

## ನನ್ನ ಅಸಹಾಯಕತೆ

ನಾನು ಅಷ್ಟೊಂದು ವ್ಯಾಸಂಗ ಮಾಡಿದ್ದರೂ, ನನ್ನ ನಿಸ್ಸಹಾಯಕತೆ, ಭಯಕ್ಕೆ ಕೊನೆ ಮೊದಲಿರಲಿಲ್ಲ. ಸ್ವತಂತ್ರವಾಗಿ ವಕೀಲೀ ವೃತ್ತಿ ಮಾಡಬಲ್ಲೆನೆಂಬ ಧೈರ್ಯ ನನಗಿರಲಿಲ್ಲ. ಸುಲಭವಾಗಿ ಬ್ಯಾರಿಸ್ಟರ್ ಎನಿಸಿಕೊಂಡುಬಿಟ್ಟೆ. ಆದರೆ ವಕೀಲೀ ನಡೆಸುವುದು ಮಾತ್ರ ಕಷ್ಟವಾಗಿತ್ತು. ನಾನು ಕಾನೂನುಗಳನ್ನು ಚೆನ್ನಾಗಿಯೇ ಅಧ್ಯಯನ ಮಾಡಿದ್ದೆ. ಆದರೆ ಅವನ್ನು ಜಾರಿಗೊಳಿಸುವ ವಿಧಾನವನ್ನು ಮಾತ್ರ ಅರಿತಿರಲಿಲ್ಲ. ಜೊತೆಗೆ ಇಂಡಿಯನ್ ಲಾ ಬಗ್ಗೆ ನನಗೆ ಏನೇನೂ ಗೊತ್ತಿರಲಿಲ್ಲ. ಅಷ್ಟೇ ಅಲ್ಲ, ಹಿಂದೂ ಲಾ ಹಾಗೂ ಮೊಹಮಡನ್ ಲಾಗಳ ಅಲ್ಪಸ್ವಲ್ಪ ಪರಿಚಯವೂ ಇರಲಿಲ್ಲ. ನನಗೆ ದಾವೆ ಹಾಕುವುದು, ಅರ್ಜಿ ಬರೆಯುವ ಕಲೆ ಕೂಡ ಗೊತ್ತಿರಲಿಲ್ಲ. ವಕೀಲೀ ವೃತ್ತಿಯಲ್ಲಿ ಪ್ರಾವೀಣ್ಯ ಗಳಿಸುವುದು ಹಾಗಿರಲಿ, ಕೊನೆಯ ಪಕ್ಷ, ಜೀವನ ನಿರ್ವಹಣೆಗೆ ಅಗತ್ಯವಾದಷ್ಟನ್ನಾದರೂ ಸಂಪಾದಿಸಬಲ್ಲೆ ಎಂಬ ಆತ್ಮ ವಿಶ್ವಾಸ ಕೂಡ ನನಗಿರಲಿಲ್ಲ.

ಆತ್ಮವಿಶ್ವಾಸದ ಕೊರತೆ, ವೃತ್ತಿ ಜೀವನದ ಬಗೆಗಿನ ಶಂಕೆಗಳಿಂದ ನಾನು ತುಂಬಾ ತಲ್ಲಣಗೊಂಡೆ. ಕೊನೆಗೊಮ್ಮೆ ಸ್ನೇಹಿತರ ಸಲಹೆಯಂತೆ ಕನ್ಸರ್‌ವೇಟಿವ್ ಪಕ್ಷದ ಫ್ರೆಡರಿಕ್ ಪಿನ್‌ಕಟ್ ಅವರನ್ನು ಭೇಟಿ ಮಾಡಿದೆ. ಭಾರತೀಯ ವಿದ್ಯಾರ್ಥಿಗಳಲ್ಲಿ ಶುದ್ಧ, ನಿರ್ವ್ಯಾಜ ಪ್ರೇಮ ಹೊಂದಿದ್ದ ಅವರ ಭೇಟಿಯನ್ನು ನಾನೆಂದಿಗೂ ಮರೆಯಲಾರೆ. ಅವರು ನನ್ನನ್ನು ಒಬ್ಬ ಹಳೆಯ ಸ್ನೇಹಿತನಂತೆ ಮಾತನಾಡಿಸಿ, ಒಂದು ಮುಗುಳ್ನಗೆಯಿಂದಲೇ ನನ್ನ ನಿರಾಸೆಯನ್ನು ಹೊಡೆದೋಡಿಸಿ ಬಿಟ್ಟರು. 'ಪ್ರತಿಯೊಬ್ಬರೂ ಫಿರೋಜ್ ಷಾ ಮೆಹ್ತಾ ಆಗಲು ಸಾಧ್ಯವೇ? ಸಾಧಾರಣ ವಕೀಲನಾಗಲು ಅಸಾಧಾರಣ ಬುದ್ಧಿವಂತಿಕೆ ಏನೂ ಬೇಕಾಗಿಲ್ಲ. ಪ್ರಾಮಾಣಿಕತೆ, ಕಾರ್ಯದಲ್ಲಿ ಆಸಕ್ತಿ ಇದ್ದರೆ ಜೀವನೋಪಾಯಕ್ಕೆ ಅಗತ್ಯವಾದಷ್ಟನ್ನು ಸಂಪಾದಿಸಿಕೊಳ್ಳಬಹುದು. ಎಲ್ಲ ಮೊಕದ್ದಮೆಗಳೂ ಕಷ್ಟವಾಗಿರುವುದಿಲ್ಲ. ನೀನು ಅಷ್ಟೊಂದು ಎದೆಗುಂದಬೇಕಾಗಿಲ್ಲ' ಎಂದು ಹುರಿದುಂಬಿಸಿದ ಅವರು, ನನ್ನ ಸಾಮಾನ್ಯ ಜ್ಞಾನ ಅತ್ಯಲ್ಪವಾಗಿರುವುದನ್ನು ಬೇಗನೇ ಮನಗಂಡರು. 'ನಿನ್ನ ಸಾಮಾನ್ಯ ಜ್ಞಾನ, ಅಧ್ಯಯನ ಸಾಕಷ್ಟಿಲ್ಲ. ಭಾರತದ ಇತಿಹಾಸ ಕೂಡ ನಿನಗೆ ಗೊತ್ತಿಲ್ಲ. ಅದಕ್ಕೂ ವಕೀಲಿ ವೃತ್ತಿಗೂ ಸಂಬಂಧವಿಲ್ಲದೇ ಹೋದರೂ ಪ್ರತಿಯೊಬ್ಬ ಭಾರತೀಯನೂ ಭಾರತದ ಇತಿಹಾಸವನ್ನು ತಿಳಿದಿರಲೇ ಬೇಕು. ನಿನ್ನಲ್ಲಿ ವ್ಯವಹಾರ ಜ್ಞಾನವೂ ಕಡಿಮೆ. ಮನುಷ್ಯನ ಮುಖ ನೋಡಿ ಸ್ವಭಾವವನ್ನು ಅರಿಯುವ ಶಕ್ತಿಯೂ ನಿನಗಿಲ್ಲ. ಅಂಥ ಸಾಮಾನ್ಯ ತಿಳುವಳಿಕೆ ನೀಡುವಂಥ ಪುಸ್ತಕಗಳನ್ನು ಓದು. ಫಿರೋಜ್ ಷಾ ಮೆಹ್ತಾ ಅವರಂಥ ನೈಪುಣ್ಯ, ಸ್ಮರಣಶಕ್ತಿ ಹಾಗೂ ಯೋಗ್ಯತೆಯನ್ನು ಗಳಿಸಿಕೋ. ನೀನು ಖಂಡಿತಾ ವಕೀಲೀ ವೃತ್ತಿಯಲ್ಲಿ ಜಯಶಾಲಿಯಾಗುವೆ' ಎಂದೂ ಅವರು ಪ್ರೋತ್ಸಾಹಿಸಿದರು. ಅವರ ಉಪಕಾರವನ್ನು ನಾನು ತುಂಬಾ ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಅವರ ಮುಂದೆ ಇರುವಷ್ಟು ಹೊತ್ತು ನನ್ನ ಭಯ, ಅಂಜಿಕೆಗಳು ಮಾಯವಾಗಿ ಹೋಗಿದ್ದವು. ಅವರಿಂದ ಬೀಳ್ಕೊಂಡ ನಂತರ ಮತ್ತೆ ಕಳವಳ ಆರಂಭವಾಯಿತು.

*(ಮುಂದುವರಿಯುವುದು)*

*Page Donated by : **Shri Suhas Gunishastri**, Prabhadevi In the memory ofhis parents **Late Smt. Rajeshwari & Late Shri P. V. Gunishastri** , Past President, H.W.T. (Dec.-2012)*

# ಈಶ್ವರ ದೈತೋಟ-ಪರಿಚಯ



ಮುದ್ರಣ ಮಾಧ್ಯಮ, ರೇಡಿಯೋ, ಟೆಲಿವಿಶನ್ ಹಾಗೂ ಅಂತರ್ಜಾಲ ಪತ್ರಿಕೋದ್ಯಮದಲ್ಲಿ ಮೂರು ದಶಕಗಳಿಗೂ ಹೆಚ್ಚು ಅನುಭವ ಹೊಂದಿ ಪತ್ರಿಕೋದ್ಯಮ, ಶಿಕ್ಷಣ, ಅಭ್ಯುದಯ ಪತ್ರಿಕೋದ್ಯಮ, ಸಾಂಸ್ಕೃತಿಕ ಪತ್ರಿಕೋದ್ಯಮ ಮತ್ತು ಮಾಧ್ಯಮ ನಿರ್ವಹಣೆಗಳಲ್ಲಿಯೂ ಅಪಾರ ಸಾಧನೆಗಳನ್ನು ದಾಖಲಿಸಿರುವ ವಿಶಿಷ್ಟ ಪ್ರತಿಭಾವಂತ ಪತ್ರಕರ್ತ 'ಈಶ್ವರ ದೈತೋಟ'.

ಈ ಎಲ್ಲ ಕ್ಷೇತ್ರಗಳಲ್ಲಿಯೂ ರಾಷ್ಟ್ರದಾದ್ಯಂತ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿ ಉದಯ, ದೂರದರ್ಶನ ಮತ್ತಿತರ ಟಿವಿ ಮತ್ತು ರೇಡಿಯೋಗಳಲ್ಲಿ ಸತತವಾಗಿ ಪ್ರಚಲಿತ ವಿಷಯಗಳ ಬಗ್ಗೆ 2000ಕ್ಕೂ ಹೆಚ್ಚು ವಿಭಿನ್ನ ಕಾಯಕ್ರಮಗಳಿಂದಾಗಿ (ಮಂಥನ, ಪಂಚಾಯ್ತಿ ಕಟ್ಟೆ, ಸಂವೇದನೆ) ಅವರು ಮನೆ ಮಾತಾಗಿದ್ದಾರೆ.

1992ರಿಂದ ಏಳು ವರ್ಷಗಳ ಕಾಲ ಉದಯವಾಣಿ ಸ್ಥಾನಿಕ ಸಂಪಾದಕರಾಗಿದ್ದ ಈಶ್ವರ್, 1999ರಿಂದ 2001ರ ವರೆಗೆ ಅತ್ಯಂತ ಹೆಚ್ಚು ಆವೃತ್ತಿಗಳು ಮತ್ತು ಪ್ರಸಾರದ ವಿಜಯ ಕರ್ನಾಟಕದ ಸಂಸ್ಥಾಪಕ ಪ್ರಧಾನ ಸಂಪಾದಕರಾಗಿ, 2005ರಿಂದ 2007ರ ವರೆಗೆ ಸಂಯುಕ್ತ ಕರ್ನಾಟಕದ ಪ್ರಧಾನ ಸಂಪಾದಕರಾಗಿ 2005ರಿಂದ 2010ರ ವರೆಗೆ ಟೈಮ್ಸ್ ಆಫ್ ಇಂಡಿಯಾ (ಕನ್ನಡ) ಸಂಪಾದಕರಾಗಿ ಮುದ್ರಣ ಮಾಧ್ಯಮದಲ್ಲಿ ಅಸಂಖ್ಯಾತ ಪ್ರಯೋಗಗಳನ್ನು ಮಾಡಿದ್ದಾರೆ. ಹಲವಾರು ವಿಶ್ವಪರ್ಯಟನೆ ಮಾಡಿರುವ ಅವರು ಮಾಜಿ ಪ್ರಧಾನಿಗಳಾದ ರಾಜೀವ ಗಾಂಧಿ, ವಿ. ಪಿ. ಸಿಂಗ್ ಮತ್ತು ಪಿ. ವಿ. ನರಸಿಂಹ ರಾವ್ ಜೊತೆಗೆ ಸ್ವೀಡನ್, ರಶಿಯಾ ಮತ್ತು ದಕ್ಷಿಣ ಅಮೇರಿಕಾ ಪ್ರವಾಸ ಮಾಡಿದ ಹೆಗ್ಗಳಿಕೆ ಪಡೆದಿದ್ದಾರೆ.

ಮೈಸೂರು ಯುನಿವರ್ಸಿಟಿಯಿಂದ ಪತ್ರಿಕೋದ್ಯಮ ಸ್ನಾತಕೋತ್ತರ ಪಡೆದಿರುವ ಈಶ್ವರ್ ಸ್ವತಃ ಶಿಕ್ಷಕರೂ ಕೂಡಾ ಹೌದು. ಜೊತೆಗೆ ಫಿಲಿಪ್ಪೀನ್ಸ್‌ನ ಪ್ರೆಸ್ ಫೌಂಡೇಶನ್ ಆಫ್ ಏಶಿಯಾದಲ್ಲಿ ಸ್ನಾತಕೋತ್ತರ ಡೆವಲೆಪ್‌ಮೆಂಟ್ ಜರ್ನಲಿಸಂ ಶಿಕ್ಷಣ ಪಡೆದವರು. ಅಭ್ಯುದಯ ಪತ್ರಿಕೋದ್ಯಮ ಅವರ ನಿತ್ಯ ಜಪ. ಅಭ್ಯುದಯ ಸಂಬಂಧಿತ ಅನೇಕ ಡಾಕ್ಯುಮೆಂಟರಿಗಳನ್ನು, ರೂಪಕಗಳನ್ನು ತಯಾರಿಸಿರುವ ಅನುಭವವೂ ಅವರಿಗಿದೆ.

ಈಶ್ವರ ದೈತೋಟರವರು ತಮ್ಮ ಬರೆಹಗಳಲ್ಲಿರುವ ವಿಷಯ ವೈವಿಧ್ಯ, ಸರಳವಾದ ಶೈಲಿ, ಆಕರ್ಷಕವಾದ ಶೀರ್ಷಿಕೆ, ಪರಿಚಿತ ವಿಷಯಗಳನ್ನು ಚಿತ್ತಾಕರ್ಷಕವಾದ ರೀತಿಯಲ್ಲಿ ನಿರೂಪಿಸುವ ವಿಧಾನದಿಂದ ಜನಪ್ರಿಯರಾಗಿದ್ದಾರೆ. ಅವರ ಬರೆಹಗಳು ಅರ್ಥಶಾಸ್ತ್ರ, ಇತಿಹಾಸ, ಜೀವಶಾಸ್ತ್ರ, ಆರೋಗ್ಯ ವಿಜ್ಞಾನ, ಮನೋವಿಜ್ಞಾನ ಇತ್ಯಾದಿ ವಿಷಯಗಳನ್ನು ಒಳಗೂಡಿಕೊಂಡಿದ್ದು, ಎಲ್ಲಿಯೂ ಗಾಂಭೀರ್ಯ, ಪಾಂಡಿತ್ಯದ ಭಾರದಿಂದ ಹೊರೆಯಾಗದೆ, ಓದುಗರು ಸರಳವಾಗಿ ಹಗುರವಾಗಿ ಓದಿಸಿಕೊಂಡು ಹೋಗುವಂತೆ ಮಾಡುತ್ತವೆ. ಆದರೆ ಓದುಗರನ್ನು ಆಳವಾದ ಚಿಂತನಕ್ಕೆ ಹಚ್ಚಿಸಿ ನಿಜವಾದ ಅರ್ಥದಲ್ಲಿ ಕಳಕಳಿಯನ್ನುಂಟು-ಮಾಡುತ್ತವೆ. ಅವರು ಹಲವಾರು ಇಂಗ್ಲೀಷ್ ಹಾಗೂ ಹಿಂದಿ ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಅವರು ಪತ್ರಿಕೋದ್ಯಮ ಮತ್ತಿತರ ವಿಷಯಗಳ ಬಗ್ಗೆ ಬರೆದಿರುವ, ಅನುವಾದಿಸಿರುವ ಪುಸ್ತಕಗಳ ಸಂಖ್ಯೆ 70ಕ್ಕೂ ಹೆಚ್ಚು. ದಿ ಎಯ್ಟೀಂತ್ ಎಲಿಫೆಂಟ್, ಪ್ರಧಾನಮಂಡಲ ವರದಿಗಾರಿಕೆ, ಅಭ್ಯುದಯ ಪತ್ರಿಕೋದ್ಯಮ, ನಾಡು ನುಡಿ, ಸಂಸ್ಕೃತಿ ಮತ್ತು ಫ್ಯಾಶನ್, ಪ್ರೆಸ್ ಅಂಡ್ ಪೊಲೀಸ್, ಪಿರಮಿಡ್-ವಾಸ್ತು, ನನ್ನದೂ ಒಂದು ಪ್ರೇಮಕಥೆ, ಮುಳುಗುತ್ತಿದ್ದೀರಾ, ಸಬ್ಮೆರೀನ್ ಆಗಿ, ಕೆಲವು ಉದಾಹರಣೆಗಳು. ಅವರು ಪತ್ರಿಕೋದ್ಯಮ ಸಂಬಂಧಿತವಾಗಿ ದೇಶ-ವಿದೇಶಗಳಲ್ಲಿ ನೀಡಿರುವ ಉಪನ್ಯಾಸಗಳು ಅಸಂಖ್ಯಾತ. ಅವರ ಹವ್ಯಾಸ ಓದುವುದು ಮತ್ತು ಪೆನ್ ಸಂಗ್ರಹ. ಅವರ ಸಂಗ್ರಹದಲ್ಲಿ 17,000 ಪೆನ್‌ಗಳಿವೆ.

**ಈಶ್ವರ ದೈತೋಟರವರಿಗೆ ದೊರೆತ ಪ್ರಶಸ್ತಿಗಳು.**

a) Best life time contribution for print and Electronic Media in Karnataka Peoples Choice Award 2008 by Z TV.

b) Outstanding contribution To Kannada Journalism 2008 by Z Kannada.

c) Best Development Journalist of the year 2007 - (Govt. of Karnataka)

d) Best Journalist of Karnataka 2007- by Kuvempu Vidya Vardhaka Trust, Mysore.

e) Best Kannada book of the year 2007 by KSRTC Kannada Sangha.

f) Best Contributor for Kannada Journalism-Sujayashri Special Award 2006 by Shri Raghavendra Math, Mantralaya.

g) Best Development Journalism Reporter 1982 by Bangalore Reporter Guide.

***ಈಶ್ವರ ದೈತೋಟರವರು ಈ ವರ್ಷದ 2012-13ನೇ ಸಾಲಿನ ಕರ್ಕಿ ವೆಂಕಟರಮಣ ಶಾಸ್ತ್ರಿ, ಸೂರಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.*** ●




*PAGE DONATED BY : **SMT. TRIVENI BHATSHIKAR & SHRI R. T. BHATSHIKAR,** GHATKOPAR IN THE MEMORY OF **LATE SHRI T. R. BHATSHIKAR** (DEC.-2012)*

# ನಮ್ಮ ಸಂಸ್ಕೃತಿ - ನಮ್ಮ ವಿದ್ಯಾಭ್ಯಾಸ

✍ ವಿಘ್ನೇಶ್ವರ ಶರ್ಮಾ, ತದ್ದಲಸೆ

ಸಾಂಸ್ಕೃತಿಕ ವಿಷಯವಾಗಿ ಮಾತು ಬಂದಾಗೆಲ್ಲ ''ನಮ್ಮದು ಭಾರತೀಯ ಸಂಸ್ಕೃತಿ. ಇದು ಉಜ್ವಲವಾಗಿದೆ. ಭವ್ಯವಾಗಿದೆ. ಇದರೊಳಗಿರುವಂಥ ಅಮೋಘ ತಾತ್ವಿಕ ದರ್ಶನಗಳು ಇನ್ನಾವುದರಲ್ಲಿಯೂ ಇಲ್ಲ'' ಇತ್ಯಾದಿಯಾಗಿ ಇದರ ಆದರ್ಶತ್ವವನ್ನು ಮುಕ್ತಕಂಠದಿಂದ ಹೆಮ್ಮೆಯಿಂದ ಹೇಳುತ್ತೇವೆ. ಗತಕಾಲದ ಸಾಂಸ್ಕೃತಿಕ ಸುಂದರ ಚಿತ್ರಗಳನ್ನೂ ಚಿತ್ರಿಸಿ ಕೊಡುವುದರಲ್ಲಿ ಮುಂದಾಗುತ್ತೇವೆ ಆದರೇನು? ಇಂಥ ದಿವ್ಯ ಭವ್ಯವಾದ ಸಾಂಸ್ಕೃತಿಕ ಔಚಿತ್ಯವನ್ನೂ ಆದರ್ಶವನ್ನೂ ಜೀವನದಲ್ಲಿ ಕಂಣಾರೆ ಕಾಣುವದರ ಬದಲು ಮಾತಿನಲ್ಲಿ, ನಮ್ಮ ಗ್ರಂಥಗಳಲ್ಲಿ ಕಾಣುತ್ತೇವೆ. ಇಷ್ಟೇ ಇದರಲ್ಲಿ ಅಭ್ಯಂತರವಾಗಿದೆ.

> ***ಜೀವನಕ್ಕೆ ಸಂಸ್ಕೃತಿ ಪೋಷಕವೆನಿಸಿದರೆ, ಸಂಸ್ಕೃತಿಗೆ ಪೋಷಕವಾದದ್ದು ವಿದ್ಯಾಭ್ಯಾಸ. ನಮ್ಮ ವಿದ್ಯಾಭ್ಯಾಸದ ಒಳಿತು ಕೆಡುಕಿಗನುಗುಣವಾಗಿ ನಮ್ಮ ಸ್ವತಂತ್ರ ನಾಡಿನ ವಿದ್ಯಾಭ್ಯಾಸಗಳಲ್ಲಿ ಸಮೃದ್ಧವಾದ ಸತ್ವಯುಕ್ತವಾದ ವಿದ್ಯಾಭ್ಯಾಸ ದೊರಕುವಂತಾದರೆ ನಮ್ಮ ಸಂಸ್ಕೃತಿಯ ಆದರ್ಶದ ರೂಪುಗಳನ್ನೆಲ್ಲ ಜೀವನದಲ್ಲಿಯೂ ಕಾಣುವಂತಾದೀತು.***
>
> ***ಸಂ. ನವಯುಗ***

ಸಂಸ್ಕೃತಿಯ ಸತ್ಯತೆಯನ್ನು ಜೀವನದಲ್ಲಿ ಕಾಣಬೇಕು. ಜೀವನವೇ ಸಂಸ್ಕೃತಿಯ ಒರೆಗಲ್ಲು. ಜೀವನ ರಂಗದಲ್ಲಿ ಸತ್ಯ-ಮತ್ತು ಸತ್ವ ಪೂರ್ಣವಾಗಿ-ಸೌಂದರ್ಯ ಯುತವಾಗಿ ಸಜೀವಿಯಾಗಿ ಉದಯ ಹೊಂದುವಂಥ ಎಲ್ಲ ತಾತ್ವಿಕ ಪ್ರವೃತ್ತಿಗೂ ಸಂಸ್ಕೃತಿಯೇ ಪ್ರೇರಕ. ಸಾತ್ವಿಕವಿರದಿದ್ದ ತಾಮಸಿಕ ಪ್ರವೃತ್ತಿಯೆಲ್ಲ ಸಂಸ್ಕೃತಿಯದ್ದಲ್ಲ. ಅದು ಸಂಸ್ಕೃತಿಯೆಂದು ಹೇಳಿಸಿಕೊಳ್ಳಲೂ ಅರ್ಹವಾದದ್ದಲ್ಲ.

ಇಂದು ಭಾರತೀಯರ ಜೀವನ ಯಾವ ಮಟ್ಟದ್ದಾಗಿದೆ? ಸಂಸ್ಕೃತಿಯ ಬೆಳಕನ್ನು ಇಲ್ಲಿ ಕಾಣುವಂತಿದೆಯೇ? ಭಾರತ ಸಂಸ್ಕೃತಿಯ ಉಜ್ವಲ ಆದರ್ಶವನ್ನು ಬಾಯಿ ತುಂಬಾ ಹೇಳುವ ನಾವು ನಮ್ಮ ಜೀವನದಲ್ಲಿ ಅದರ ಅಲ್ಪಾಂಶವನ್ನಾದರೂ ಕಾಣಿಸಿಕೊಡಲು ಸಿದ್ಧರಿದ್ದೇಯೋ? ಇಲ್ಲವೆಂದು ನಮ್ಮ ಬಾಳಿನಲ್ಲಿ ಉಂಟಾದ ವಿಷಮ ಪರಿಸ್ಥಿತಿಯೇ ಇದಕ್ಕೆ ಉತ್ತರ ಕೊಡುತ್ತದೆ. ನಮ್ಮ ಜೀವನದಲ್ಲಿ ಸಂಸ್ಕೃತಿ ರೂಪುಗೊಂಡಿದ್ದರೆ ಇಂದೇಕೆ ಇಂಥ ಭೀಕರ ಪರಿಸ್ಥಿತಿ ತಲೆಯೆತ್ತುತ್ತಿತ್ತು? ಅನ್ನದಾರಿದ್ರ್ಯ-ಜ್ಞಾನ ದಾರಿದ್ರ್ಯ-ಇವುಗಳ ತಾಂಡವ ನೃತ್ಯ ಅನಿರ್ಬಂಧವಾಗಿ ಅನೂಹ್ಯವಾಗಿ ಸಾಗಿ ಹೋಗಿದೆ. ನಾಡಿನ ತುಂಬಾ ವಿದ್ವೇಷ ವಂಚನ-ಮೋಸ ಅನ್ಯಾಯಗಳೆಲ್ಲಾ ರಾಶಿರಾಶಿಯಾಗಿ ಬೆಳೆದು ನಿಂತಿದೆ. ಹೊಟ್ಟೆ ತುಂಬಾ ಅನ್ನ ಮೈ ತುಂಬ ಬಟ್ಟೆಯನ್ನು ದೊರಕಿಸಿಕೊಳ್ಳಬೇಕಾದರೂ ನೂರಾರು ಅನ್ಯಾಯಗಳನ್ನು ದಾಟಬೇಕಾಗುತ್ತದೆ. ಇಂತಿರುವಾಗಲೂ ಸಂಸ್ಕೃತಿಯ ಆದರ್ಶವಾದದಲ್ಲೇ ನಮ್ಮ ಮನಸ್ಸು ತಲ್ಲೀನಹೊಂದಿದೆ.

ಇದಕ್ಕೆ ಕಾರಣ ಇನ್ನಾವುದೂ ಅಲ್ಲ. ನಮ್ಮ ವಿದ್ಯಾಭ್ಯಾಸ, ಸಂಸ್ಕೃತಿಯನ್ನು ಬೆಳೆಸಿ ಬೆಳಗಿಸುವಂಥ ಕ್ರಿಯೆ ವಿದ್ಯಾಭ್ಯಾಸದಿಂದಾಗಬೇಕು. ಜೀವನಕ್ಕೆ ಸಂಸ್ಕೃತಿ ಪೋಷಕವೆನಿಸಿದರೆ ಸಂಸ್ಕೃತಿಗೆ ಪೋಷಕವಾದದ್ದು ವಿದ್ಯಾಭ್ಯಾಸ. ಇದರಿಂದ ನಮ್ಮ ವಿದ್ಯಾಭ್ಯಾಸದ ಸ್ಥಿತಿಗತಿಗೆ ಅನುಸರಿಸಿಯೇ ನಮ್ಮ ಸಂಸ್ಕೃತಿಯು ರೂಪುಗೊಳ್ಳುತ್ತದೆ. ಇಂದಿನ ನಿಃಸತ್ವ ವಿದ್ಯಾಭ್ಯಾಸವೇ ನಮ್ಮ ಜೀವನವನ್ನು ಇಂಥ ಭೀಕರ ಪರಿಸ್ಥಿತಿಗೆ ತಂದಿಳಿಸಿಬಿಟ್ಟಿದೆ. ಸಂಸ್ಕೃತಿಯ ಪ್ರಭಾವ ಜೀವನದ ಮೇಲೆ ಉದ್ಭವಿಸಿದಂತೆ ಅದರ ಮಧುರವಾದ ಬಾಂಧವ್ಯ ಜೀವನಕ್ಕೆ ದೊರಕದಂತೆ ಮಾಡಿಬಿಟ್ಟಿದೆ. ನಮ್ಮ ವಿದ್ಯಾಭ್ಯಾಸ ಅಂದಾಗ ಜೀವನವು ಹದಗೆಡದೇ ಉಳಿಯ ಬಲ್ಲದೆ? ಅದರ ಸೌಂದರ್ಯ ಚಿತ್ರಕ್ಕೆ ವಿದ್ರೂಪವುಂಟಾದರೆ ಆಶ್ಚರ್ಯವೇನು?

ನಮ್ಮ ಭಾರತೀಯ ಸಂಸ್ಕೃತಿಗೆ ಭಾರತೀಯ ವಿದ್ಯಾಭ್ಯಾಸವೇ ಬೇಕು. ಇಂದು ಅದು ದೊರಕದೆ ವಿದೇಶೀಯ ವಿದ್ಯಾಭ್ಯಾಸದಿಂದ ನಮ್ಮ ಸಂಸ್ಕೃತಿ ತೇಜೋಹೀನವಾಗಿ ಬಿಟ್ಟಿದೆ. ಅದರೊಳಗಿರುವಂಥ ವಿಶಾಲವಾದ ತಾತ್ವಿಕ ವಿಚಾರಗಳೆಷ್ಟೋ ನಾವು ಮರೆತು ನಮ್ಮವರೊಡನೆಯೇ ದ್ವೇಷ-ಅಪ್ರೀತಿಗಳಿಂದ ವ್ಯವಹರಿಸುತ್ತಿದ್ದೇವೆ. ಯಾವ ಕವಿಯು ''ತಸ್ಕರಾಣಾಂ ಪತಯೋ ನಮಃ ರಥಕಾರೇಭ್ಯೋ ನಮಃ ಚರ್ಮಕಾರೇಭ್ಯೋ ನಮಃ'' ಎಂದು ಸಮಾಜದ ಹಿತ ಮಾಡುವಂಥ ಎಲ್ಲ ಜೀವಿಗಳನ್ನು ಪೂಜ್ಯತೆಯಿಂದ ಕಾಣುವಾಗ ನಮ್ಮ ಸಂಸ್ಕೃತಿಯ ಹೃದಯ ಅದೆಷ್ಟು ವಿಶಾಲವಾಗಿರಲಿಕ್ಕೆ ಸಾಕು. ವಿಶ್ವ ಜೀವಿಗಳನ್ನೆಲ್ಲ ವಿಶಾಲ ಬಂಧು ಪ್ರೇಮದಿಂದ ನೋಡುವಂಥ ನಮ್ಮೊ ಸಂಸ್ಕೃತಿಗೂ ಇಂದು ದಿನನಿತ್ಯವೂ ನಡೆಯುವಂಥ ದ್ವೇಷ-ಹಿಂಸೆಗಳ ದುರ್ವರ್ತನೆಗೂ ಅಳತೆ ಮಾಡಿದರೆ ಭೂಮ್ಯಾಕಾಶದಷ್ಟು ಅಭ್ಯಂತರವಾಗದೇ ಇರದು.

ಪ್ರಾಚೀನ ಕಾಲದ ವಿದ್ಯಾಭ್ಯಾಸಗಳಲ್ಲಿ ಮುಖ್ಯವೆನಿಸಿದ ಗುರುಕುಲ ಶಿಕ್ಷಣವು ನಮ್ಮೊ ಸಂಸ್ಕೃತಿಯನ್ನು ಸಜೀವಿಯಾಗಿ ರೂಪುಗೊಳಿಸುತ್ತಿತ್ತು. ಗುರುಕುಲದ ನಿಯಮ ನಿಬಂಧನೆಗಳು ಶಾರೀರಿಕ ಹಿತವನ್ನು ಸಾಧಿಸಿಕೊಡುವುದರೊಂದಿಗೆ ಮಾನಸಿಕ ವಿಕಾಸತೆಯನ್ನು ಸಿದ್ಧಿಸಿಕೊಡುತ್ತಿತ್ತು. ಇಂದಿನ ಶಾಲೆ-ಕಾಲೇಜುಗಳಿಗಿಂತಲೂ ಅಂದಿನ ಒಂದೊಂದು ಗುರುಕುಲವು ದೊಡ್ಡದಿದ್ದು ವಿದ್ಯಾರ್ಥಿಗಳ ಯೋಗಕ್ಷೇಮವನ್ನು ನೋಡಿಕೊಳ್ಳುವುದರಲ್ಲಿಯೂ ಹೆಸರುಗಳಿಸಿತ್ತು. ನಾಗರೀಕತೆಯಲ್ಲಿ ಮುಂದುವರಿದ ಅಮೇರಿಕಾ ಇಂಗ್ಲೆಂಡುಗಳಲ್ಲಿಯ ಕಾಲೇಜುಗಳಿಗಿಂತಲೂ ನಾಲಂದ, ಮುಂತಾದ ಗುರುಕುಲಗಳು ಹೆಚ್ಚು ವೈಶಿಷ್ಟ್ಯವುಳ್ಳದ್ದಾಗಿತ್ತು ಎಂದು ತಿಳಿಯುತ್ತದೆ. ಹತ್ತು ಸಾವಿರ ವಿದ್ಯಾರ್ಥಿಗಳ ಅನ್ನಪಾನಾದಿ ವ್ಯವಸ್ಥೆಯೊಂದಿಗೆ ವಿದ್ಯಾಭ್ಯಾಸವು ಸಾಗುತ್ತಿತ್ತು. ಇಂದಿನಂತೆ ಪರೀಕ್ಷೆಯೇ ಅವರ ಪಾಂಡಿತ್ಯದ ನಿಯಮವಾಗಿರದೆ ವಿದ್ಯಾಪ್ರಸಾರವನ್ನು ಹೆಚ್ಚೆಚ್ಚು ರೀತಿಯಿಂದ ಮಾಡುವ ಕ್ರಿಯೆಯೇ ಪಾಂಡಿತ್ಯ ಸೂಚಕವೂ ಗುರುದಕ್ಷಿಣೆಯೂ ಆಗಿತ್ತು. ಇಂಥ ಸಮೃದ್ಧವಾದ ವಿದ್ಯಾಭ್ಯಾಸದಿಂದ ಅಂದಿನ ಜೀವನದಲ್ಲಿ ಧೀ ಶಕ್ತಿಯ ಪ್ರಚೋದನೆ ನಿರಂತರವೂ ಆಗಿ ಸಂಸ್ಕೃತಿಯ ಬೆಳಕು ಅಬಾಧಿತವಾಗಿ ಬೆಳಗುತ್ತಿತ್ತು.

ಇಂದು ನಮ್ಮ ವಿದ್ಯಾಭ್ಯಾಸ ನಮಗೆ ಯಾವ ಪ್ರಚೋದನೆಯನ್ನುಂಟು ಮಾಡುತ್ತಿದೆ? ಬುದ್ಧಿಯನ್ನು ವಿಕಾಸಗೊಳಿಸುವ ಬದಲು ವಿಲಾಸತನಕ್ಕೆ ಹೊಂದಿಸುತ್ತಿದೆ. ನಮ್ಮ ಸಂಸ್ಕೃತಿ ಸಂಪ್ರದಾಯಗಳಲ್ಲಿರುವಂಥ ಓಜಸ್ವಿಯಾದ ವಿಚಾರಗಳನ್ನು ಓದಬೇಕಾಗಿದೆ. ನಮ್ಮಲ್ಲಿಯ ಪಠ್ಯ ಪುಸ್ತಕಗಳಲ್ಲಿ ಭಾರತೀಯರ ಆದರ್ಶ ಜೀವನಕ್ಕೆ ಸಾಕಷ್ಟು ಸ್ಥಾನ ದೊರೆಯದೇ ವಿದೇಶೀಯರ ಸಣ್ಣ ಸಂಗತಿಗಳ ಬಗ್ಗೆಯೂ ಮಹತ್ವ ಕೊಡಬೇಕಾಗಿದೆ. ಭಾರತದಲ್ಲಿ ಪರಕೀಯರ ಆಳ್ವಿಕೆಗಳಿಂದ ಆದ ಹಾನಿ ಎಲ್ಲಕ್ಕೂ ಹೆಚ್ಚಿನದು. ಒಂದೇ ದೇಶೀಯ ಜನಾಂಗದಲ್ಲೇ ಭಿನ್ನತೆಯ ಕಲುಷಿತ ಭಾವನೆಯನ್ನು ಹುಟ್ಟಿಸಿತು. ಆಲಸ್ಯ, ಪರಾವಲಂಬಿತ್ವ ಇವನ್ನೆಲ್ಲ ಬೆಳೆಸಿ ನಾಡು ನಲಿಯದಂತೆ ಮಾಡಿಸಿತು. ಅಂದಾಗ ವಿದೇಶೀಯರ ಶಿಕ್ಷಣ ಭಾರತೀಯ ಸಂಸ್ಕೃತಿಯೂ ಪ್ರಗತಿಗಾಗಿತ್ತೇ! ಅಥವಾ ಅದರ ಪತನದಿಂದ ತಮ್ಮ ನಿರಂಕುಶ ಪ್ರಭುತ್ವವನ್ನು ಸಾಧಿಸುವುದಕ್ಕಿತ್ತೇ! ಇದನ್ನೆಲ್ಲ ತಿಳಿದ ಗೆಳೆಯರೊಬ್ಬರು ಹೇಳಿದ ಮಾತು ''ಇಂದು ನಮ್ಮ ನಾಡಿನ ವಿದ್ಯಾಲಯಗಳಲ್ಲಿ ವಿದ್ಯಾ+ಲಯ ವಾಗುತ್ತಿರುವುದನ್ನು ಗಮನಿಸದೇ ನಾಡ ಜೀವನವನ್ನು ಬರಿದೆ ದೂರಿದರೆ ಫಲವೇನು?'' ಎಂದು ಹೇಳಿದ್ದರಲ್ಲಿ ನೂರಕ್ಕೆ ನೂರರಷ್ಟು ಸತ್ಯವಿದೆ.

ಸಂಸ್ಕೃತಿಯೆಂದರೆ ಇದರ ಸುಲಭವಾದ ವ್ಯಾಖ್ಯೆಯನ್ನು ಹೀಗೆ ವಿವರಿಸಿಕೊಳ್ಳೋಣ-ಒಳ್ಳೆಯ ಸ್ವಭಾವವೆಂದು! ವಿದ್ಯೆಯೆಂದರೆ ಜ್ಞಾನ. ಅಂತಿರುವಾಗ ಒಳ್ಳೆಯ ಸ್ವಭಾವಕ್ಕೂ ಜ್ಞಾನಕ್ಕೂ ಎಷ್ಟು ನಿಕಟವಾದ ಸಂಬಂಧ ವಿದೆ; ಬಾಂಧವ್ಯವಿದೆ. ಅದಕ್ಕಾಗಿಯೇ ಸಂಸ್ಕೃತಿಯ ಬೆಳಕಿಗೆ ವಿದ್ಯೆಬೇಕು. ನಮ್ಮ ಸ್ವತಂತ್ರನಾಡಿನ ವಿದ್ಯಾಲಯಗಳಲ್ಲಿ ಸಮೃದ್ಧವಾದ ಸತ್ವಯುಕ್ತವಾದ ವಿದ್ಯಾಭ್ಯಾಸವು ವಿದ್ಯಾರ್ಥಿಗಳಿಗೆ ದೊರಕುವಂತಾದರೆ ನಮ್ಮ ಸಂಸ್ಕೃತಿಯ ಆದರ್ಶದ ರೂಪುಗಳೆಲ್ಲ ಜೀವನದಲ್ಲಿಯೂ ಕಾಣುವಂತಾಗಬಹುದು. ಆಗ ಬಾಳಿನ ಜಟಿಲವಾದ ಸಮಸ್ಯೆಗಳೆಲ್ಲ ನೀಗಲೂಬಹುದು.

ನಾಡಿನ ಸುಧಾರಣೆಗೆ ಪ್ರಯತ್ನಿಸುವವರೆಲ್ಲ ಮೊದಲಿಗೆ ಶಿಕ್ಷಣದ ಸುಧಾರಣೆಗೆ ಪ್ರಯತ್ನಿಸಿದ್ದರೆ ನಾಡಿನ ಸುಧಾರಣೆ ಅದೆಷ್ಟೋ ಸುಲಭವಾಗುತ್ತಿತ್ತು. ಎಲ್ಲರಿಗೂ ಸಾಕಷ್ಟು ವಿದ್ಯಾಭ್ಯಾಸ ದೊರಕುವಂತಾದರೆ ಜನಾಂಗದಲ್ಲಿ ಕರ್ತವ್ಯದ ಜಾಗೃತಿ-ವಿವೇಕ-ಶಾಂತಿ-ಕ್ಷಮೆ ಇವೆಲ್ಲ ಬಲಿತು ಬಂದರೆ ಅದೇ ಸಂಸ್ಕೃತಿಯ ಪ್ರತಿಬಿಂಬ. ''ಧೀಯೋಯೋನಃ ಪ್ರಚೋದಯಾತ್'' ನಮ್ಮ ಬುದ್ಧಿಗೆ ನಿರಂತರವೂ ಪ್ರಚೋದಿಸುವಂಥ ದಿವ್ಯ ಧೀಶಕ್ತಿಯನ್ನು ಕೊಡುವಂಥ ಸಮೃದ್ಧವಾದ ವಿದ್ಯಾಭ್ಯಾಸ ಬೇಕು. ಅದೇ ನಮ್ಮ ಸಂಸ್ಕೃತಿಗೆ ಪೋಷಕವಾದದ್ದು, ಪ್ರಗತಿದಾಯಕವಾದದ್ದು. ●

***ಕೃಪೆ : 1953ರ ಜನವರಿ ತಿಂಗಳ ನವಯುಗ ವಾರಪತ್ರಿಕೆ***

*PAGE DONATED BY :* ***SHRI V. G. BHAT, NIGDI*** *(DEC.-2012)*

# ಯಜ್ಞೋಪವೀತದ ಮಹತ್ವ

✍ ವಿದ್ವಾನ್ ಕೆ. ಗಣಪತಿ ಭಟ್, ಕರ್ಕಿ

ಯಜ್ಞೋಪವೀತವನ್ನು ತಂದೆಯು ಉಪನಯನದ ಸಮಯದಲ್ಲಿ ಮಗನಿಗೆ ಮಂತ್ರ ಪೂರ್ವಕವಾಗಿ ತೊಡಿಸುತ್ತಾನೆ. ಇದಕ್ಕೆ ಸೂತ್ರ ಪ್ರಧಾನವೆಂದು ಹೆಸರು. ಷೋಡಶ ಸಂಸ್ಕಾರಗಳಲ್ಲಿ ಉಪನಯನವು ಅತಿ ಮುಖ್ಯವಾದದ್ದು. ದ್ವಿಜತ್ವ ಸಿದ್ಧಿಗೆ ಇದು ಕಾರಣ. ಯಜ್ಞೋಪವೀತವಿಲ್ಲದೆ ಯಾವ ಕರ್ಮವನ್ನೂ ಮಾಡಲಿಕ್ಕೆ ಅಧಿಕಾರವಿಲ್ಲ. ಮಂತ್ರದಲ್ಲಿ ಹೇಳುವಂತೆ ಯಜ್ಞೋಪವೀತವು ಬ್ರಹ್ಮನ ಜೊತೆಯಲ್ಲಿಯೇ ಹುಟ್ಟಿದ್ದು, ಪವಿತ್ರವಾದದ್ದು, ಆಯುಷ್ಯಕಾರಕ ತೇಜಸ್ಸನ್ನೂ, ಬಲವನ್ನೂ ಹೆಚ್ಚಿಸುವುದು. ಇದು ಯಾವಾಗಲೂ ಬಲಗಡೆ ಇರಬೇಕು. ದೇವತಾ ಕಾರ್ಯ ಮಾಡುವಾಗ ಬಲಕ್ಕೂ, ಪಿತೃಕಾರ್ಯದಲ್ಲಿ ಎಡಕ್ಕೂ, ಋಷಿ ಪೂಜೆಯಲ್ಲಿ ಮಾಲಾಕಾರವಾಗಿಯೂ ಇರಬೇಕು. ಇದಿಲ್ಲದೇ ಯಾವ ಪುಣ್ಯ ಕಾರ್ಯವನ್ನೂ ಸಂಧ್ಯಾವಂದನಾದಿ ನಿತ್ಯ ಕರ್ಮವನ್ನೂ ಹೆಚ್ಚೇಕೆ ಊಟವನ್ನೂ ಮಾಡುವಂತಿಲ್ಲ. ಯಜ್ಞೋಪವೀತವಿಲ್ಲದವನು ಬ್ರಾಹ್ಮಣತ್ವವನ್ನೇ ಕಳೆದುಕೊಳ್ಳುತ್ತಾನೆ. ಶೂದ್ರನಿಗೆ ಸಮಾನ ಎಂದು ಶಾಸ್ತ್ರ ಹೇಳುತ್ತದೆ.

ಇದನ್ನು ಶುದ್ಧವಾದ ಹತ್ತಿಯ ನೂಲಿನಿಂದ ಪ್ರಮಾಣಬದ್ಧವಾಗಿ ತಯಾರಿಸಬೇಕು. ತೊಂಬತ್ತಾರು ಅಂಗುಲವುಳ್ಳ ಮೂರು ಎಳೆಯಿಂದ ನಿರ್ಮಿಸಿದ ದಾರವನ್ನು ಮತ್ತೆ ಮೂರು ಎಳೆ ಮಾಡಿ ಗಂಟನ್ನು ಹಾಕಬೇಕು. ಇದಕ್ಕೆ ಬ್ರಹ್ಮಗಂಟು ಎಂದು ಹೆಸರು. ಯಜ್ಞೋಪವೀತದಲ್ಲಿ ಒಟ್ಟಿಗೆ ಒಂಬತ್ತು ತಂತುಗಳು. ಒಂದೊಂದಕ್ಕೆ ಒಂದೊಂದು ದೇವತೆಯನ್ನು ಆಹ್ವಾನಮಾಡಿ ಪೂಜಿಸಬೇಕು. ಆ ದೇವತೆಗಳೆಂದರೆ ಓಂಕಾರ, ಅಗ್ನಿ, ನಾಗ, ಸೋಮ, ಪಿತೃ, ಪ್ರಜಾಪತಿ, ವಾಯು, ಸೂರ್ಯ, ವಿಶ್ವೇದೇವ ಎಂದು ಪ್ರಸಿದ್ಧಿ ಯಜ್ಞೋಪವೀತವನ್ನು ಮತ್ತೆ ಗಾಯತ್ರಿಯಿಂದ ಆಮಂತ್ರಿಸಿ ಪೂಜಿಸಬೇಕು. ಗಾಯತ್ರಿಯನ್ನು ಹೇಳಿ ಅಭಿಮಂತ್ರಿಸಬೇಕು. ನಂತರ ಸೂರ್ಯನಿಗೆ ತೋರಿಸಿ ಧರಿಸಬೇಕು. ಅದಕ್ಕೂ ಮಂತ್ರವಿದೆ–

**''ಯಜ್ಞೋಪವೀತಂ ಪರಮಂ ಪವಿತ್ರಂ**
**ಯಜ್ಞೋಪವೀತಂ ಬಲಮಸ್ತು ತೇಜಃ''**

ಜನನ, ಮರಣ ಮೊದಲಾದ ಆಶೌಚಗಳು ಬಂದಾಗ, ಆಶೌಚ ನಿವೃತ್ತಿಯ ದಿನ ಯಜ್ಞೋಪವೀತವನ್ನು ಬದಲಾಯಿಸಬೇಕು. ಹರಿದರೆ ಬೇರೆ ಹಾಕಿಕೊಳ್ಳಬೇಕು. ಅದು ಹಗಲಿನಲ್ಲೇ. ರಾತ್ರಿಯಾದರೆ ಊಟವನ್ನು ಮಾಡುವಂತಿಲ್ಲ. ಸಂಧ್ಯಾವಂದನಾ, ಜಪಾದಿಗಳನ್ನು ಮಾಡುವಂತಿಲ್ಲ. ಮೂರು ತಿಂಗಳಿಗೊಮ್ಮೆ ಬದಲಾಯಿಸಬೇಕು. ವಿಸರ್ಜನೆ ಮಾಡಿದ ಉಪವೀತವನ್ನು ನೀರಿನಲ್ಲಿಯೇ ಬಿಡಬೇಕು. ಸನ್ಯಾಸಿಗಳಿಗೆ ಯಜ್ಞೋಪವೀತವಿಲ್ಲ. ಸನ್ಯಾಸ ಕಾಲದಲ್ಲಿ ಎಲ್ಲವನ್ನೂ ತ್ಯಾಗ ಮಾಡವಾಗ ಕರ್ಮ ಮಾಡಲು ಮುಖ್ಯವಾದ ಈ ಯಜ್ಞೋಪವೀತವನ್ನು ತೆಗೆದು ಹಾಕುತ್ತಾರೆ.

ಬ್ರಾಹ್ಮಣನಿಗೆ ಗರ್ಭಾಷ್ಟಮದಲ್ಲಿ ಅಥವಾ ಜನ್ಮಾಷ್ಟಮ ವರ್ಷದಲ್ಲಿ ಉಪನಯನ ಮಾಡಬೇಕೆಂಬುದು ಶಾಸ್ತ್ರ. ಉಪನಯನ ಸಂಸ್ಕಾರವು ಬ್ರಾಹ್ಮಣನಿಗೆ ಬ್ರಾಹ್ಮಣತ್ವವನ್ನೇ ಉಂಟು ಮಾಡುವುದು. ತಂದೆಯು ಮಗನಿಗೆ ಗಾಯತ್ರಿಯ ಉಪದೇಶವನ್ನು ಮಾಡಿ ವೇದಾಧ್ಯಯನ ಮಾಡಲು ಗುರುಗಳ ಸನ್ನಿಧಿಗೆ ಕಳುಹಿಸುತ್ತಾನೆ. ಆದ್ದರಿಂದಲೇ ಉಪನಯನ ಎಂದು ಹೆಸರು. ವೇದವೆಂದರೆ ಸಮಸ್ತ ಜ್ಞಾನ, ವಿಜ್ಞಾನಗಳ ನಿಧಿ. ಅವು ಋಗ್ವೇದ, ಯಜುರ್‌ವೇದ, ಸಾಮವೇದ, ಅಥರ್ವವೇದಗಳೆಂದು ವೇದವ್ಯಾಸರಿಂದ ವಿಭಾಗಿಸಲ್ಪಟ್ಟಿವೆ. ವೇದಗಳಿಗೆ ಇತಿ ಮಿತಿ ಇಲ್ಲ. ಅನಂತ, ಅನಾದಿ ಬ್ರಹ್ಮಚಾರಿಯು ಗುರು ಸೇವೆ ಮಾಡುತ್ತ ವೇದ ವೇದಾರ್ಥಗಳನ್ನು ತಿಳಿದು ಸರ್ವಜ್ಞನಾಗುತ್ತಾನೆ. ಅನಂತರ ಗುರುಗಳ ಅನುಮತಿಯನ್ನು ಪಡೆದು ಗ್ರಹಸ್ಥಾಶ್ರಮವನ್ನು ಸ್ವೀಕರಿಸುತ್ತಾನೆ. ಇದೇ ಸಂದರ್ಭದಲ್ಲಿ ಅವನಿಗೆ ದ್ವಿತೀಯ ಯಜ್ಞೋಪವೀತವನ್ನು ಧಾರಣೆ ಮಾಡಿಸುತ್ತಾರೆ. ಆದ್ದರಿಂದ ಗೃಹಸ್ಥನಿಗೆ ಎರಡು ಯಜ್ಞೋಪವೀತ. ಅವನು ಸಪತ್ನಿಕನಾಗಿ ವೇದೋಕ್ತವಾದ ಶ್ರೌತ, ಸ್ಮಾರ್ತಾದಿ ಕರ್ಮಗಳನ್ನು ಮಾಡಿ ಐಂಕಿತ ಆಮುಷ್ಮಿಕ ಲೋಕಗಳನ್ನು ಜಯಿಸುತ್ತಾರೆ. ಇಲ್ಲಿ ಸಲ್ಲುವವನು ಅಲ್ಲಿಯೂ ಸಲ್ಲುತ್ತಾನೆ. ಸ್ವರ್ಗ ಮೋಕ್ಷಗಳನ್ನು ಪಡೆಯುತ್ತಾನೆ. ಪೂಜ್ಯ ಶಂಕರಾಚಾರ್ಯರು ಇದನ್ನೇ ತಮ್ಮ ಸ್ತೋತ್ರದಲ್ಲಿ ಘೋಷಿಸಿದ್ದಾರೆ.

''ವೇದೋ ನಿತ್ಯಮಧೀಯತಾಮ್ ತಮದಿತಂ ಕರ್ಮ ಸ್ವನುಷ್ಟಿಯತಾಮ್'' ಇತ್ಯಾದಿ ಯಜ್ಞಕ್ಕೆ ಸಾಧಕವಾದ್ದರಿಂದಲೇ ಯಜ್ಞೋಪವೀತವೆಂದು ಇದಕ್ಕೆ ಹೆಸರು.

## ಸಂಧ್ಯಾವಂದನೆ

ಬ್ರಾಹ್ಮಣನು ಅನುಷ್ಠಾನ ಮಾಡಬೇಕಾದ ಅಗ್ನಿಹೋತ್ರ, ಪಂಚಯಜ್ಞ, ದೇವರ್ಷಿ ಪಿತೃತರ್ಪಣ, ವೈಶ್ವದೇವಾದಿ ನಿತ್ಯ ಕರ್ಮಗಳಲ್ಲಿ ಸಂಧ್ಯಾವಂದನೆಗೆ ಪ್ರಥಮ ಸ್ಥಾನ. ಇದನ್ನು ಬೆಳಿಗ್ಗೆ, ಮಧ್ಯಾಹ್ನ, ಸಂಜೆ ಹೀಗೆ ಮೂರೂ ಕಾಲಗಳಲ್ಲಿ ಸಮಯಕ್ಕೆ ಸರಿಯಾಗಿ ಮಾಡಬೇಕು. ಬೆಳಿಗ್ಗೆ ಅರುಣೋದಯದಲ್ಲಿ ಎದ್ದು ಸ್ನಾನಮಾಡಿ ಆಚರಿಸುವುದು. ಮಧ್ಯಾಹ್ನ ಸೂರ್ಯನು ನೆತ್ತಿಯ ಮೇಲೆ ಬಂದಾಗ, ಸಂಜೆ ಸೂರ್ಯಾಸ್ತವಾಗುವ ಸಮಯದಲ್ಲಿ ಮಾಡಬೇಕು. ಕಾಲಾತಿಕ್ರಮವಾದರೆ, ದೋಷ ಪರಿಹಾರಕ್ಕಾಗಿ ಪ್ರಾಯಶ್ಚಿತ್ತಾರ್ಘ್ಯವನ್ನು ಕೊಡಬೇಕು. ಸಂಧ್ಯಾವಂದನೆಯಲ್ಲಿ ಸಂಕಲ್ಪ, ಅಭಿಮಂತ್ರಿತ ಜಲಪಾನ, ಅರ್ಘ್ಯಪ್ರಧಾನ, ಜಪ, ಉಪಸ್ಥಾನಗಳು ಮುಖ್ಯಾಂಶಗಳು ಪ್ರಾತಃಕಾಲದಲ್ಲಿ, ಗೋಕರ್ಣಾಕೃತಿ ಹಸ್ತದಲ್ಲಿ ನೀರನ್ನು ತೆಗೆದುಕೊಂಡು ಸೂರ್ಯಶ್ಚ, ಮಾಮನ್ಯುಶ್ಚೇತ್ಯಾದಿ ಮಂತ್ರದಿಂದ ಅಭಿಮಂತ್ರಿಸಿ ಕುಡಿಯಬೇಕು.

**ಮಂತ್ರದ ತಾತ್ಪರ್ಯ:** ನಾನು ಮನೋವಾಕ್ಕಾಯಗಳಿಂದ ಮಾಡಿದ ಎಲ್ಲ ಪಾಪಗಳನ್ನು ಸೂರ್ಯನ ಜ್ಯೋತಿಯಲ್ಲಿ ಹೋಮಿಸುತ್ತೇನೆ. ಮಧ್ಯಾಹ್ನದ ಅಭಿಮಂತ್ರಣೆಯಲ್ಲಿ ನಾನು ತಿಳಿಯದೇ ಮಾಡಿದ ಪಾಪಗಳನ್ನು, ತಿನ್ನಬಾರದ ವಸ್ತುವನ್ನು ತಿಂದ ದೋಷವನ್ನು, ಎಂಜಲು ತಿಂದ ದೋಷವನ್ನು ಅಭಿಮಂತ್ರಿತ ನೀರಿನಿಂದ ತೊಳೆದುಕೊಳ್ಳುತ್ತೇನೆ. ಸಂಧ್ಯೆ ಅಭಿಮಂತ್ರಣದಲ್ಲಿ ಹಗಲು ಮಾಡಿದ ಜ್ಞಾತಾಜ್ಞಾತವಾದ ಎಲ್ಲ ಪಾಪಗಳನ್ನು ಕಳೆದುಕೊಳ್ಳುತ್ತೇನೆ.

ತಂದೆಯು ಹೋಮಪೂರ್ವಕವಾಗಿ ಗಾಯತ್ರಿ ಉಪದೇಶವನ್ನು, ಅಷ್ಟಾಕ್ಷರಿ, ಪಂಚಾಕ್ಷರಿ, ಜಪೋಪದೇಶಗಳನ್ನು ಮಗನಿಗೆ ಮಾಡುತ್ತಾನೆ. ಸವಿತ್ರ ದೇವತೆಯಾದ ಗಾಯತ್ರಿಯ ಜಪದಿಂದ ಉತ್ತಮ ಜ್ಞಾನ ಪ್ರಾಪ್ತಿಯೂ, ಅಷ್ಟಾಕ್ಷರ, ಪಂಚಾಕ್ಷರಿ ಜಪದಿಂದ ದೇವತಾನುಗ್ರಹವೂ ಆಗುತ್ತದೆ.

ಉಪಸ್ಥಾನವೆಂದರೆ ಎದ್ದು ನಿಂತು ಸೂರ್ಯನಿಗೂ ಪೂರ್ವಾದಿ ದಿಗ್ ದೇವತೆಗಳಿಗೂ ಗಂಗಾ ಯಮುನಾದಿ ಪುಣ್ಯ ನದಿ ತೀರದಲ್ಲಿ ತಪೋನಿರತರಾದ ಮುನಿಗಣಗಳಿಗೂ ನಮಸ್ಕರಿಸುವುದು ಮತ್ತು ಮೃತ್ಯುದೇವತೆಯಾದ ಯಮಧರ್ಮ ರಾಜನಿಗೂ, ಮೃತ್ಯುವಿಗೂ ಮೃತ್ಯುವಾದ ಈಶ್ವರನಿಗೂ, ಜ್ಞಾನಿಗಳಿಗೆ ಮೋಕ್ಷ ಸ್ವರೂಪಿಯಾದ ಪರಮಾತ್ಮನಿಗೂ, ನಮಸ್ಕಾರಗಳು ಮಂತ್ರಪೂವಕವಾಗಿ ಮಾಡಲ್ಪಡುತ್ತವೆ. ನಿತ್ಯಕರ್ಮವಾದ ಸಂಧ್ಯಾವಂದನೆಯನ್ನು ಮಾಡುವದರಿಂದ ಬ್ರಾಹ್ಮಣನು ಪುಣ್ಯಾತ್ಮನಾಗುತ್ತಾನೆ. ಅದನ್ನು ಬಿಟ್ಟರೆ ಪಾಪಿಯಾಗುತ್ತಾನೆ.

''ಸ್ವಧರ್ಮೆ ನಿಧನಂ ಶ್ರೇಯಃ'' ಎಂದು ಗೀತೋಪದೇಶವಿದೆ. ಬಸ್ಸು, ರೈಲು, ವಿಮಾನಾದಿಗಳಲ್ಲಿ ಪ್ರವಾಸ ಮಾಡುವಾಗ ಸಂಧ್ಯಾವಂದನೆಗೆ ಅನುಕೂಲವಿಲ್ಲದಾಗಲೂ ಆಯಾ ಕಾಲದಲ್ಲಿ ಮನಸ್ಸಿನಲ್ಲಿಯೇ ಸಂಧ್ಯಾಕ್ರಿಯೆಯನ್ನು ಧ್ಯಾನಿಸಬೇಕು ಎಂದು ಶಾಸ್ತ್ರ ಹೇಳುತ್ತದೆ. ರೋಗ ಹಾಗೂ ಅಪಘಾತಗಳಿಂದ ನಿತ್ಯಕರ್ಮವನ್ನು ಮಾಡಲು ಅಸಮರ್ಥನಾಗಿ ಅದನ್ನು ಬಿಟ್ಟಾಗಲೂ ಅನಂತರ ಪ್ರಾಯಶ್ಚಿತ್ತಾದಿಗಳಿಂದ ಪಾಪ ಪರಿಹಾರ ಮಾಡಿಕೊಳ್ಳಬೇಕು. ಒಂದೊಂದು ಪಾಪಕ್ಕೆ ಒಂದೊಂದು ಪ್ರಾಯಶ್ಚಿತ್ತವಿದೆ. ಉದಾಹರಣೆಗೆ ನಿರಶನ, ಏಕಬುಕ್ತಿ, ಚಾಂದ್ರಾಯಣ, ಗೋದಾನ, ಕುಷ್ಮಾಂಡ ಹವನ, ಪಂಚಗವ್ಯ ಪ್ರಾಶನ ಇತ್ಯಾದಿ.

## ಭೋಜನ ವಿಧಿ

ಬ್ರಾಹ್ಮಣನು ಸಾತ್ವಿಕವಾದ ಆಹಾರವನ್ನೇ ತೆಗೆದುಕೊಳ್ಳಬೇಕು. ಊಟಕ್ಕೆ ಮೊದಲು ಗಾಯತ್ರಿ ಮಂತ್ರದಿಂದ ಅನ್ನಾದಿಗಳನ್ನು ಅಭಿಮಂತ್ರಿಸಿ ಕೈಯಲ್ಲಿ ನೀರನ್ನು

*Continued on page 12*

*PAGE DONATED BY : **WELL WISHER OF HWT***

# ಸಂಕ್ಷಿಪ್ತ ಸುದ್ದಿಗಳು

## ಪ್ರಥಮ ಕನ್ನಡ ವಿಶ್ವ ಸಮ್ಮೇಳನ ಯುರೋಪ್-2011



ಲಂಡನ್ ನಗರದ ಮರ್ಮೇಡ್ ಕಾನ್ಫರೆನ್ಸ ಸಭಾಂಗಣದಲ್ಲಿ ಇತ್ತೀಚೆಗೆ ಪ್ರಥಮ ವಿಶ್ವಕನ್ನಡ ಸಮ್ಮೇಳನ-ಯುರೋಪ್-2011 ಸಂಭ್ರಮದಿಂದ ಎರಡು ದಿನಗಳ ಕಾಲ ಜರುಗಿತು. ಇಂಗ್ಲೆಂಡಿನ ಕನ್ನಡಿಗರ 'ಸಂಗಮ'ಸಂಸ್ಥೆ ಹಾಗೂ ಇಂಡಿಯನ್ ಕ್ಲಾಸಿಕ್ ಆರ್ಟ್ ಸಂಸ್ಥೆಗಳು ಜಂಟಿಯಾಗಿ ಆಯೋಜಿಸಿದ ಈ ಸಮ್ಮೇಳನದಲ್ಲಿ ಕನ್ನಡ ನಾಡಿನಿಂದ ಅನೇಕ ಕಲಾವಿದರು, ಸಿನಿಮಾ ಕ್ಷೇತ್ರದ ಗಣ್ಯರು, ಸಾಹಿತಿಗಳು, ಕವಿಗಳನ್ನು ಬರಮಾಡಿಕೊಳ್ಳಲಾಗಿತ್ತು. ಹೊರನಾಡಿನ ಬೇರೆ ಬೇರೆ ದೇಶದಲ್ಲಿ ನೆಲೆಸಿರುವ ಕನ್ನಡಿಗರು ಭಾಗವಹಿಸಿದ್ದ ಈ ಸಮಾರಂಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸಾಹಿತಿ ಪ್ರೋ. ಭುವನೇಶ್ವರಿ ಹೆಗಡೆ ಹಾಸ್ಯ ಸಾಹಿತ್ಯದ ಕುರಿತು ಉಪನ್ಯಾಸ ನೀಡಿದರು. ಇವರನ್ನು ಖ್ಯಾತ ಕನ್ನಡ ಚಿತ್ರನಟ ಶ್ರೀನಾಥ ಅವರು ಸನ್ಮಾನಿಸಿದರು. ಸಂಗಮ ಸಂಸ್ಥೆಯ ಅಧ್ಯಕ್ಷ ದ್ವಾರಕಾನಾಥ್ ಶಾಸ್ತ್ರಿ, ಕಾರ್ಯದರ್ಶಿ ಕುಮಾರ್ ಕುಂಠಿಕಾನ ಮಠ, ಕವಿ ದೊಡ್ಡರಂಗೇಗೌಡ, ಚಂದ್ರಶೇಖರ್ ಗುರೂಜಿ ಮುಂತಾದವರು ಉಪಸ್ಥಿತರಿದ್ದರು.

## ಕರ್ನಾಟಕ ಸಂಘದ ಮಕ್ಕಳ ಮೇಳ ಅಭಿನಂದನೀಯ



ಕರ್ನಾಟಕ ಸಂಘ ಮುಂಬಯಿ ವತಿಯಿಂದ ಮುಂಬಯಿ ಮತ್ತು ಉಪನಗರಗಳ ಕನ್ನಡ ಮನಪಾ ಮತ್ತು ಖಾಸಗಿ ಹಗಲು ಮತ್ತು ರಾತ್ರಿ ಶಾಲಾ ಮಕ್ಕಳಿಗಾಗಿ ಆಯೋಜಿಸಿದ ಮಕ್ಕಳ ಮೇಳ ಡಾ। ವಿಶ್ವೇಶ್ವರಯ್ಯ ಸ್ಮಾರಕ ಸಭಾಗೃಹದಲ್ಲಿ ನಡೆಯಿತು.

ಹವ್ಯಕ ವೆಲ್ಫೇರ್ ಟ್ರಸ್ಟ್‌ನ ಮುಖವಾಣಿ ''ಹವ್ಯಕ ಸಂದೇಶ''ದ ಸಂಪಾದಕಿ, ನ್ಯಾಯವಾದಿ ಅಮಿತಾ ಭಾಗವತ್ ಮಕ್ಕಳ ಮೇಳವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಕನ್ನಡ ಸಾಹಿತ್ಯ, ಸಂಗೀತ ಹಾಗೂ ಸಂಸ್ಕೃತಿಯ ಸಂಗಮವಾದ ''ಕರ್ನಾಟಕ ಸಂಘ ಮುಂಬಯಿ'' ಮಕ್ಕಳ ಪ್ರತಿಭಾ ಪ್ರದರ್ಶನಕ್ಕೆ ಇಂತಹ ವೇದಿಕೆಯನ್ನು ಒದಗಿಸಿಕೊಟ್ಟಿದ್ದು ಅಭಿನಂದನೀಯ ಎಂದು ನುಡಿದರು.

ಸಂಘದ ಅಧ್ಯಕ್ಷ ಶ್ರೀ ಜಿ. ಡಿ. ಜೋಶಿಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದು ಮಕ್ಕಳು ಇಂತಹ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಬೇಕು ಎಂದು ಮಕ್ಕಳನ್ನು ಉತ್ತೇಜಿಸಿದರು.

ಗೌರವ ಕೋಶಾಧಿಕಾರಿ ಓಂದಾಸ್ ಕಣ್ಣಂಗಾರ್ ಪ್ರಸ್ತಾವನೆ ಗೈದರು. ಸುಮಂಗಳಾ ಶೆಟ್ಟಿ ಸ್ವಾಗತಿಸಿದರು. ಸೀತಾ ಸನತ್‌ಕುಮಾರ್ ಜೈನ್ ಅತಿಥಿಗಳನ್ನು ಪರಿಚಯಿಸಿದರು. ಮರಿಯಪ್ಪ ನಾಟೇಕರ್ ಕಾರ್ಯಕ್ರಮ ನಿರೂಪಿಸಿದರು. ಸುರೇಂದ್ರಕುಮಾರ್ ಮಾರ್ನಾಡ್ ವಂದಿಸಿದರು.

ಮಕ್ಕಳಿಗಾಗಿ ಚಿತ್ರಕಲೆ, ಕಥೆ, ಭಾವಗೀತೆ, ಏಕ ಪಾತ್ರಾಭಿನಯ, ಜಾನಪದ, ಸಮೂಹಗೀತೆ ಸಮೂಹ ನೃತ್ಯ ಮೊದಲಾದ ಸ್ಪರ್ಧೆಗಳನ್ನು ನಡೆಸಲಾಯಿತು.

## ಜಯಂತ್ ಕಾಯ್ಕಿಣಿಯವರಿಗೆ ಗೌರವ ಡಾಕ್ಟರೇಟ್



ಸೃಜನಶೀಲ ಕವಿ, ಅತ್ಯುತ್ತಮ ಕಥೆಗಾರ, ವಿಶಿಷ್ಟವಾದ ಅಂಕಣಕಾರರಾಗಿ ತಮ್ಮ ಪ್ರತಿಭೆಯನ್ನು ಮೆರೆದು ಗೋಕರ್ಣ ಮೂಲದ ಜಯಂತ್ ಕಾಯ್ಕಿಣಿಯವರು ಕನ್ನಡದ ಸೃಷ್ಟಿ ಶೀಲ ಸಾಹಿತ್ಯ ನಿರ್ಮಾಣದಲ್ಲಿ ಅನನ್ಯ ಕೊಡುಗೆಯನ್ನು ನೀಡಿದ್ದಾರೆ. ಮನುಷ್ಯನ ಮನೋಲೋಕದ ವಿಸ್ಮಯಕಾರಿ ಜಗತ್ತನ್ನು ಭೇದಿಸುತ್ತ, ಓರ್ವ ಶ್ರೇಷ್ಠ ಕಲಾವಿದನಂತೆ ಭಾವಗಳಿಗೆ ಉಸಿರುಕೊಟ್ಟು ಅತ್ಯಂತ ಕಲಾತ್ಮಕತೆಯಿಂದ ಚಿತ್ರಿಸುವ ಕೆಲಸವನ್ನು ಅತ್ಯಂತ ನಾಜೂಕಾಗಿ ಮಾಡುವ ಇವರು ಈಗಾಗಲೇ ನಾಲ್ಕುಬಾರಿ ಸಾಹಿತ್ಯ ಅಕಾಡಮಿ ಪ್ರಶಸ್ತಿ, ದಿನಕರ ದೇಸಾಯಿ ಪ್ರಶಸ್ತಿ, ಬಿ.ಎಚ್. ಶ್ರೀಧರ ಪ್ರಶಸ್ತಿ, ದೆಹಲಿಯ ಕಥಾ ಪ್ರಶಸ್ತಿ, ರಾಜ್ಯ ಚಲನಚಿತ್ರ ಪ್ರಶಸ್ತಿ ಇವುಗಳಿಂದ ಸನ್ಮಾನಿತರಾಗಿದ್ದಾರೆ. ಇತ್ತೀಚೆಗೆ ಇವರಿಗೆ ತುಮಕೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ನೀಡಲಾಯಿತು.



## DR. DINESH K. HEGDE

Dr. Dinesh K. Hegde has been appointed by Chief Minister of Maharashtra State as Governing Council of Children's Aid Society Mumbai from December 31st 2011 for 3 years.

## ANNUAL SHREE SATYANARAYANA POOJA AT DOMBIVLI

Annual Shree Satyanarayana Pooja was performed at Dombivli on 25th December 2011 at Maratha Mandir Hall, Dombivli



*PAGE DONATED BY :* ***SHRI N. R. HEGDE, DOMBIVLI*** *(DEC.-2012)*

(West). The Programme started at 9.30 am. The Pooja was performed by Mrs. Pushpa and Mr. Arvind Bhat on behalf of Dombivli Pooja Committee.

In the morning session ladies participated in Rangoli competition and children were busy with the drawing competitions. After Mahamangalarathi at 1.30 p.m. "Tirth-Prasad" was distributed, followed by sumptuous lunch

The afternoon session started at 3p.m. with "Ganapathi Vandana". Mr. N.R .Hegde, President, Havyaka Welfare Trust and Mr. Ramesh Vaidya, Co-ordinator Pooja Committee were on the dias with Mr. Shivanand G. Hegde Chief Guest.with his wife Mrs. Vrinda.

Mr.Vaidya welcomed the chief guest and all Havyaka Bandhavas for the programme. Mrs. Sumitra Bhat introduced the chief guest to the members present. Mr. Shivanand Hegde is a prominent member of the Havyaka Welfare Trust.

Mr. Shivanand Hegde is from Muroor, Kumta, He completed his graduation at Kumta and Post Graduation ( Msc.) from Karnataka University Dharwar, He started his career with a Multinational Company Eskayef Ltd, manufacturers of medicines and went on to become Vice President, and Techinical Director. Presently he is associated with M/S. Lasa Laboratories as a Director. Mr. Hegde is from a famous Yakshgana Artists Family from Muroor and he is the nephew of the Great Yakshagana Artist Shri. Devaru Hegde. He acted in Yakshagana & Talamaddale in his younger days and his articles were published in Kannada magazines also.

Mr. D.N. Bhat adjudged the Rangoli and Drawing competitions and the Chief Guest distributed the Prizes to the winners.

The prize distribution ceremony was followed by entertainment programme like dances by children. The most interesting programme was a Magic Show by Mr. Mahesh Hegde & his wife. Magic Master Mr. Mahesh Hegde is basically an Engineer who is having his own consulting firm in Pune and he conducts the Magic Show as a Hobby. His show was excellent and the audience enjoyed a lot.

Almost 225 persons attended this annual Pooja programme from all over Dombivli, Thane and Mumbai.

*Report by Mr.Ramakant Shastri (Dombivli Pooja Committee)*

## OBITUARY



Shri Gopalkrishna N. Kurse (69) Ex-Vice President of Havyaka Welfare Trust, expired on 5th January 2012 after a brief illness. A native of Gokarn, he completed his graduation in Mechanical Enfgineering from Davangere and came to Mumbai in 1968. He setup his own industry in the year 1972. He expanded his industry and moved to Baroda in 1986. He was generous, kind hearted and very much helpful to the community.

***We pray for the eternal peace of the departed soul.***

### ಬಾಳಿಗೆ ಅರ್ಥ

ಸತ್ತು ಹೋಗುವ ಮುನ್ನ ಹುಟ್ಟಿದ್ದಕ್ಕೆ ಅರ್ಥ
ತರದಿರಲು ಬರಿ ಬರಿದೆ ಬಾಳೆಲ್ಲ ವ್ಯರ್ಥ
ಅರ್ಥವೆಂದರೆ ಬರಿಯ ಹಣ ಮಾತ್ರ ಅಲ್ಲ,
ಮಾನವನು ಆಗದಿರೆ ಕವಡೆ ಬೆಲೆ ಇಲ್ಲ.

ವಿಡಂಬಾರಿ

### ದಿನಚರಿ

ಸೃಷ್ಟಿಗುಡಿಗೆ ಕೆಂಪು ದೀಪವ ಹಚ್ಚಿ
ಸಂಪಿಗೆಮೊನೆ ಕಿರಣದ ಕಡ್ಡಿಯ ಚುಚ್ಚಿ
ಇಬ್ಬನಿನೀರ ಗೋಮಯ ಚಿಮುಕಿಸಿ
ತರಗೆಲೆಗಳಲಿ ರಂಗೋಲಿ ಬಿಡಿಸಿ
ಬರುವವನವನು ನೇಸರನು ॥

ಶಿಸ್ತಿನ-ಸಿಪಾಯಿ ನಸುಕಲೇ ಎದ್ದು
ಅರಳಿದ ಸುಮಗಳ ಪೂಜೆಗೆ ತಂದು
ಶುಕ-ಪಿಕ ಕೊರಳಲಿ ಗಾನವ ಉಲಿದು
ಖಗ-ಮೃಗ ಖರ ಗಂಟೆ-ಜಾಗಟೆ ಬಡಿದು
ಬರುತಿಹನವನು ನೇಸರನು ॥

ಪ್ರಖರ ಕಾಂತಿಯ ಪ್ರಭೆಯ ಬೀರುತ
ಮೂಲೆ ಮೂಲೆಯನು ಇಣಕಿ ನೋಡುತ
ಜಡಜೀವಿಗಳಿಗೆ ಚೈತನ್ಯ ತುಂಬುತ
ಬದುಕಿಗೆ ಕಾಯಕ ಮಾರ್ಗವ ತೋರುತ
ಬರುತಿರುವನವನು ನೇಸರನು ॥

ದಿನವಿಡೀ ಗೇಯುತ ದಣಿದಿಹ ಮನಕೆ
ಚೆಂಬಾನಿನ ತಂಪು ಆಲಿಂಗನವಿಟ್ಟು
ಭೂಮಾತೆಗೆ ಸಿಂಧೂರವನು ಕೊಟ್ಟು
ಶಶಿಯುಬರವಿಗೆ ಅಣಿಮಾಡಿಟ್ಟು
ತೆರಳುವನವನು ನೇಸರನು ॥

ಶಾಂತಾ ಶಾಸ್ತ್ರಿ, ಠಾಕುರ್ಲಿ (ಪ)


# SUVITEK INTERNATIONAL

**Authorised Dealers for : ARMSTRONG, INTERARCH, CRIL**

- ⋆ PRE-ENGINEERED BUILDINGS
- ⋆ ROOFINGS
- ⋆ WALL CLADDINGS
- ⋆ THERMAL INSULATIONS
- ⋆ FALSE CEILINGS
- ⋆ FALSE FLOORINGS
- ⋆ BLINDS
- ⋆ SIGNAGES

◆

**5/98, Jayvijay Society, Sahar Road, Mumbai-400 099 India**
**Tel. : 2834 2952 ● Fax : 2824 8794**
**E-mail : suvitek@gmail.com**

*ADVT.*


*PAGE DONATED BY : **HEGDE HOSPITAL,** CHEMBUR, COURTESY : **DR. DINESH HEGDE** (DEC.-2012)*

'Havyaka Sandesha', February 2012

RNI NO. MAHBIL / 2000 / 746,
Postal R.NO. MH/MR/N/161/MBI/2012-2014

Posted at Mumbai Patrika Channel Stg. Office Mumbai-400 001

Date of Posting :
27, 28th of every previous month

*If undelivered, please return to :*
**HAVYAKA WELFARE TRUST**
B-207, Valmiki Apts., Near Pharmacy College,
Sundar Nagar, Kalina, Vidyanagari P. O.,
Mumbai - 400 098. ✆ 2665 2591
**E-mail : havyakamumbai@hotmail.com**
**Visit : www.havyakamumbai.com**

Published by Narayan Akadas R.
for Havyaka Welfare Trust, Mumbai - 400 098.
being printed at M/s. Navin Printers, Mumbai - 400 016.
Hon. Editor : **Smt. Amita S. Bhagwat**

**REGISTERED NEWSPAPER**

To,

ತೆಗೆದುಕೊಂಡು ಪ್ರಾಶನಮಾಡುವ ಮೊದಲು ಚಿತ್ರ, ಚಿತ್ರಗುಪ್ತ, ಯಮ, ಧರ್ಮ ರಾಜಾದಿಗಳಿಗೆ ಅನ್ನವನ್ನು ಇಟ್ಟು ತೃಪ್ತಿಪಡಿಸಬೇಕು. ಅದರಿಂದ ಯಮಧೂತರಾದ ಇವರು ಸಂತುಷ್ಟರಾಗಿ ನಮಗೆ ಆಯುಷ್ಯವನ್ನು ಹೆಚ್ಚಿಸಬೇಕು ಎಂಬುದು ತತ್ವ ಅಲ್ಲದೇ ನಮ್ಮ ಜೀವನಕ್ಕೆ ಆಧಾರವಾದ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಎಂಬ ಪಂಚ ಪ್ರಾಣಗಳು ಬಲಿಷ್ಠವಾಗಿ ನಮ್ಮನ್ನು ಸದಾ ಪೋಷಿಸಬೇಕೆಂದು ಮೊದಲು ಆಹುತಿಯನ್ನು ಕೊಡುತ್ತೇವೆ. ಇದರಿಂದ ನಾವು ತಿಂದ ಆಹಾರದಿಂದ ದೇವತಾನುಗ್ರಹವನ್ನು ಪಡೆದು ಪರಿಪಕ್ವರಾಗಿ ಆನಂದದಿಂದ ಜೀವಿಸಬೇಕು ಎಂಬುದನ್ನು ಅರಿಯುತ್ತೇವೆ. ಆದ್ದರಿಂದ ಬ್ರಾಹ್ಮಣನಿಗೆ ಹೆಜ್ಜೆ ಹೆಜ್ಜೆಯಗೂ ಆತ್ಮೋದ್ಧಾರದ ನಿಯಮಗಳು ವಿಧಿಸಲ್ಪಟ್ಟಿರುತ್ತವೆ.

**ಪಂಚಾಯತನ ಪೂಜಾ:-** ಬ್ರಾಹ್ಮಣನ ನಿತ್ಯ ಕರ್ಮಗಳಲ್ಲಿ ಇದೂ ಒಂದು. ಘಂಟಾನಾದದಿಂದ ಇದು ಪ್ರಾರಂಭಿಸಲ್ಪಡುತ್ತವೆ. ಘಂಟಾನಾದವು ದೇವತೆಗಳ ಆಹ್ವಾನ, ರಾಕ್ಷಸರ ನಿರ್ಗಮನಕ್ಕೆ ಸಂಕೇತ.

''ದೇಹೋ ದೇವಾಲಯ ಪ್ರೋಕ್ತಃ'' ಎಂಬ ಮಂತ್ರದಂತೆ ನಮ್ಮ ಶರೀರವೇ ದೇವಾಲಯ ಆತ್ಮನೇ ಈಶ್ವರ ಎಂದು ಭಾವಿಸಿ ಪೂಜಿಸುವದರಿಂದ ಅಜ್ಞಾನ ನಿವೃತ್ತಿಯಾಗಿ, ಸುಜ್ಞಾನ ಪ್ರಾಪ್ತಿಯಾಗುವುದು ಸಂಕಲ್ಪ, ಕಲಶಪೂಜೆ, ಶಂಖ ಪೂಜೆ, ಆತ್ಮಾರ್ಚನೆ, ಮಂಡಪಾರ್ಚನೆ, ಪೀಠ ಪೂಜೆ, ಇವುಗಳು ಪೂರ್ವಾಂಗಗಳು. ಸೂರ್ಯ, ಗಣಪತಿ, ಅಂಬಿಕಾ, ಈಶ್ವರ, ವಿಷ್ಣು ಇವರು ಪಂಚಾಯತನ ದೇವರು. ಒಂದೇ ದೇವರನ್ನು ಬೇರೆ ಬೇರೆ ಫಲಗಳನ್ನು ಉದ್ದೇಶಿಸಿ, ಬೇರೆ ಬೇರೆ ರೂಪದಲ್ಲಿ ಪೂಜೆಯನ್ನು ವಿಧಿಸಿದ್ದಾರೆ. ಸೂರ್ಯನಿಂದ ಆರೋಗ್ಯ, ಗಣಪತಿಯಿಂದ ನಿರ್ವಿಘ್ನತೆ, ಅಂಬಿಕೆಯಿಂದ ಸಂಪತ್ತು, ಈಶ್ವರನಿಂದ ಜ್ಞಾನ, ವಿಷ್ಣುವಿನಿಂದ ಮೋಕ್ಷ, ಈ ಫಲಗಳು ಆನಂದಮಯವಾದ ಸುಖ ಜೀವನಕ್ಕೆ ಬೇಕೇ ಬೇಕು. ಆದ್ದರಿಂದ ಈ ದೇವತೆಗಳನ್ನು ಧ್ಯಾನ, ಆಹ್ವಾನೆ, ಆಸನ, ಅರ್ಘ್ಯ ಇವೆ ಮೊದಲಾದ ಷೋಡಷೋಪಚಾರಗಳಿಂದ ಪೂಜಿಸಬೇಕು. ಸಂಕ್ಷೇಪವಾಗಿ ಮುದ್ರಾ ಪ್ರದರ್ಶನದೊಂದಿಗೆ ಪಂಚೋಪಚಾರ ಪೂಜೆಯೂ ರೂಢಿಯಲ್ಲಿದೆ. ಗಂಧ, ಪುಷ್ಪ, ಧೂಪ, ದೀಪ ನೈವೇದ್ಯ ಇವೇ ಪಂಚೋಪಚಾರಗಳು. ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ನಾಲ್ಕು ವಿಧವಾದ ಪುರುಷಾರ್ಥಗಳನ್ನು ಪಡೆಯುವುದೇ ಜೀವನದ ಗುರಿ. ಮೋಕ್ಷವೆಂದರೆ ಜನನ- ಮರಣ ಪರಂಪರೆಯಿಂದ ಬಿಡುಗಡೆ. ಜೀವಾತ್ಮನು ಪರಮಾತ್ಮನಲ್ಲಿ ಐಕ್ಯವಾಗುವುದು. ''ಜ್ಞಾನೇನೈವತು ಕೈವಲ್ಯಂ''ಎಂಬ ಉಕ್ತಿಯಿವೆ. ಬೆಳಕು ಕತ್ತಲೆಯನ್ನು ನಾಶಮಾಡುವಂತೆ ಜ್ಞಾನಾಗ್ನಿಯು ಸರ್ವ ಕರ್ಮಗಳನ್ನು ಭಸ್ಮ ಮಾಡುತ್ತದೆ. ಜ್ಞಾನಕ್ಕಾಗಿ ಸದ್ಗುರುವನ್ನು ಪಡೆಯಬೇಕು. ಅವರಿಂದ ಆತ್ಮಜ್ಞಾನ ಹೊಂದಿ ಮೋಕ್ಷ ಪಡೆಯಬೇಕು. ಅದ್ವೈತಪ್ರಾಪ್ತಿ ಎಂಬ ಮೋಕ್ಷವು ಗುರು ಶುಶ್ರೂಷೆಯಿಂದಲೇ ಲಭ್ಯ.

## ಪಿತೃ ಯಜ್ಞ

ಗೃಹಸ್ಥನು ಆಚರಿಸಲೇಬೇಕಾದ ಪಂಚಯಜ್ಞಗಳಲ್ಲಿ ಇದೂ ಒಂದು. ಪಂಚ ಯಜ್ಞಗಳೆಂದರೆ ದೇವ ಯಜ್ಞ, ಪಿತೃಯಜ್ಞ, ಭೂತ ಯಜ್ಞ, ಮನುಷ್ಯ ಯಜ್ಞ, ಬ್ರಹ್ಮ ಯಜ್ಞ.

1) ದೇವಯಜ್ಞವೆಂದರೆ ವೇದೋಕ್ತ ಕರ್ಮಗಳಿಂದ ದೇವತೆಗಳನ್ನು ತೃಪ್ತಿಪಡಿಸುನವುದು

2) ಭೂತಯಜ್ಞವೆಂದರೆ ಪ್ರಾಣಿದಯೆ, ಆಕಳು, ಕುರಿ, ನಾಯಿ, ಬೆಕ್ಕು ಮೊದಲಾದ ಪ್ರಾಣಿಗಳನ್ನು ಪ್ರೀತಿಯಿಂದ ಸಾಕುವುದು.

3) ಮನುಷ್ಯಯಜ್ಞವೆಂದರೆ ಸಮಾಜಕ್ಕೆ ಬೇಕಾದ ವಿದ್ಯಾದಾನ, ಮಾನಾದಿಗಳನ್ನು ಒದಗಿಸುವುದು ಸಮಾಜ ಸೇವೆ.

4) ಬ್ರಹ್ಮಯಜ್ಞವೆಂದರೆ ನಿತ್ಯವೂ ವೇದಾಧ್ಯಯನ, ಅಧ್ಯಾಪನಗಳನ್ನು ಮಾಡುವದು.

5) ಪಿತೃಯಜ್ಞ-ನಮಗೆ ಜನ್ಮವನ್ನು ಕೊಟ್ಟು ವಿದ್ಯಾ, ಬುದ್ಧಿಯನ್ನು ಒದಗಿಸಿ ನಮ್ಮನ್ನು ಉದ್ಧಾರ ಮಾಡಿರುವ ತಂದೆ, ತಾಯಿಯರನ್ನು ಅವರ ಜೀವಿತ ಕಾಲದಲ್ಲಿ, ವೃದ್ಧಾಪ್ಯದಲ್ಲಿ ಸೇವಿಸುವುದು.ಮರಣಾನಂತರ ಉತ್ತರಕ್ರಿಯಾದಿಗಳನ್ನು ಶಾಸ್ತ್ರೋಕ್ತವಾಗಿ ಮಾಡಿ ಅವರಿಗೆ ಸದ್ಗತಿಯನ್ನು ಕಲ್ಪಿಸುವುದು ದೇಹತ್ಯಾಗಾನಂತರ ಜೀವನಾತ್ಮನು ತನ್ನ ಪಾಪ ಪುಣ್ಯಗಳಿಗೆ ತಕ್ಕಂತೆ 84 ಲಕ್ಷ ಯೋನಿಗಳಲ್ಲಿ ಎಲ್ಲಾದರೂ ಹುಟ್ಟಬಹುದು. ಜನ್ಮಗಳಲ್ಲೆಲ್ಲ ಮನುಷ್ಯ ಜನ್ಮವೇ ಶ್ರೇಷ್ಠ. ಬ್ರಾಹ್ಮಣ ಜನ್ಮ ದುರ್ಲಭ. ವೇದೋಕ್ತ ಸಂಸ್ಕಾರಗಳನ್ನು ಹೊಂದುವ ಪುಣ್ಯ ಜನ್ಮ. ಧರ್ಮ, ಅರ್ಥ, ಕಾಮ ಮೋಕ್ಷಗಳೆಂಬ ಪುರುಷಾರ್ಥಗಳನ್ನು ಹೊಂದಲು ಯೋಗ್ಯವಾದ ಜನ್ಮ. ಬ್ರಾಹ್ಮಣನಿಗೆ ಐಹಿಕ ಸಂಸ್ಕಾರಗಳು ಷೋಡಷ (16) ಗರ್ಭಾದಾನಾದಿ ವಿವಾಹದವರೆಗೆ. ಸಂಸ್ಕಾರವೆಂದರೆ ದೋಷಗಳನ್ನು ದೂರಮಾಡಿ ಗುಣಗಳನ್ನು ತುಂಬುವದು. ಸ್ಥೂಲ ದೇಹವನ್ನು ಬಿಟ್ಟ ಮೇಲೆ ಜೀವಾತ್ಮನಿಗೆ ಔರ್ಧ್ವ ದೈಹಿಕ ಸಂಸ್ಕಾರಾದಿಗಳನ್ನು ಮಕ್ಕಳು ಮಾಡುವದು ಕರ್ತವ್ಯ. ದೇಹವನ್ನು ಬಿಟ್ಟ ಜೀವಾತ್ಮನು ಸೂಕ್ಷ್ಮ ದೇಹದಿಂದ ಬೇರೆ ಜನ್ಮಕ್ಕೆ ಹೋಗುತ್ತಾನೆ. ಪಂಚಪ್ರಾಣ, ಮನಸ್ಸು, ಬುದ್ಧಿ, ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಿಂದ ಕೂಡಿದ ಜೀವಾತ್ಮನು ಸೂಕ್ಷ್ಮ ದೇಹಿ. ತಾನು ಮಾಡಿದ ಪಾಪ ಪುಣ್ಯಕ್ಕೆ ತಕ್ಕಂತೆ ದೇಹಾಂತರವನ್ನು ಹೊಂದುತ್ತಾನೆ. ಹೀಗೆ ಹೊರಟ ಜೀವಾತ್ಮನಿಗೆ ಸದ್ಗತಿಯನ್ನು ಕಲ್ಪಿಸಲು ಪುತ್ರಾದಿಗಳು ಮಾಡವ ಸಂಸ್ಕಾರ ಅವನ ಉನ್ನತಿಗೆ ಕಾರಣ. ದಾನ-ಮಾನಾದಿಗಳಿಂದ ಮೃತ ಪಿತೃಗಳಿಗೆ ಪುಣ್ಯದ ಗಂಟನ್ನು ಕಟ್ಟುವ ಪುಣ್ಯ ಕರ್ಮ, ಸಪಿಂಡೀಕರಣವನ್ನು (ಶ್ರಾದ್ಧ) ಮಾಡಿ ಪೂರ್ವ ಪಿತೃಗಳ ಪಂಕ್ತಿಯಲ್ಲಿ ಇವರನ್ನು ಸೇರಿಸುತ್ತಾರೆ. ಅವರು ಅಲ್ಲಿ ಬಹುಕಾಲ ಆನಂದದಿಂದ ಇದ್ದು ಪಿತೃಗಳಿಗಾಗಿ ಮಕ್ಕಳು ಮಾಡುವ ಶ್ರಾದ್ಧಾದಿಗಳಿಂದ ತೃಪ್ತರಾಗುತ್ತಾರೆ. ಅಲ್ಲಿಂದ ಬೇರೆ ಜನ್ಮಕ್ಕೆ ಹೋದರೂ ಅಲ್ಲಿಯೂ ಇವರು ಮಕ್ಕಳು ಕೊಟ್ಟ ದಾನ-ಮಾನಾದಿಗಳಿಂದ ತೃಪ್ರತಾಗುತ್ತಾರೆ. ಪುತ್ರರು ಪಿತೃ ಋಣದಿಂದ ಬಿಡುಗಡೆ ಹೊಂದಿ ಪುಣ್ಯ ಭಾಜನರಾಗಿ ಕೊನೆಯಲ್ಲಿ ಪುಣ್ಯಲೋಕವನ್ನೇ ಸೇರುತ್ತಾರೆ. ●

*PAGE DONATED BY : **SHRI VIVEK BHAGWAT,** MULUND (DEC.-2012)*